# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XXII - 4    ಏಪ್ರಿಲ್ 2004

## ಈ ಸಂಚಿಕೆಯಲ್ಲಿ

ಅಸೋಸಿಯೇಷನ್‌ನಲ್ಲಿ :

| | | |
|---|---|---|
| ಮರುಳುಗೊಳಿಸಿದ ಇನಿ ದನಿಗಳು | ● ರಮಾ ವಸಂತ | 2 |
| ಪ್ರತಿಭಾ ಸ್ಪರ್ಧೆ, ಆಟೋಟ ಸ್ಪರ್ಧೆಯ ಬಹುಮಾನ ವಿನಿಯೋಗದ ಕಾರ್ಯಕ್ರಮ Forthcoming Programmes | ● ಲಕ್ಷ್ಮೀ ಸೀತಾರಾಂ | 3 |
| ಮತ್ತೂರು ಜೀವನ ಗಾಥೆಯ ನೆನಪು (ಭಾಗ - 3) | ● ಡಾ. ಜಿ.ಎಸ್. ಉಪಾಧ್ಯ | 4 |
| ಕವನ : ವಿಜ್ಞಾನಿಗಳು | ● ಪ್ರೊ. ವಸಂತ ಕುಷ್ಟಗಿ | 6 |
| ವೇದ ಕಾಲೀನ ಸ್ತ್ರೀಯರ ಪರಂಪರೆ | ● ವಾಸುದೇವ ಕಾಣೆಮಾರ್ | 7 |
| ಅಲಮೇಲಮ್ಮನ ಶಾಪ | ● ಶೇಷಗಿರಿ ರಾವ್ ಮುರ್ಟಂಗ್ | 8 |
| ಭಾರತೀಯ ಕಲೆ ಭಾಗ - 22<br>ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ | | 10 |
| ಸುತ್ತ-ಮುತ್ತ | | 13 |
| Ranga Shibir | | 16 |

**Rs. 5/-**

The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

ಅಸೋಸಿಯೇಷನ್‌ನಲ್ಲಿ

# "ಮರುಳುಗೊಳಿಸಿದ ಇನಿ ದನಿಗಳು"

ತಮ್ಮೆಲ್ಲರಿಗೂ ತಿಳಿದಿರುವಂತೆ ೨೦೦೩ ನವೆಂಬರ್ ತಿಂಗಳಿನಲ್ಲಿ ಮೈಸೂರು ಅಸೋಸಿಯೇಷನ್ನಿನಲ್ಲಿ ವಿದುಷಿ, ಡಾ. ಶ್ರೀಮತಿ ಸುಕನ್ಯಾ ಪ್ರಭಾಕರ ಅವರ ನೇತೃತ್ವದಲ್ಲಿ ಮೈಸೂರು ಜಯಚಾಮರಾಜೇಂದ್ರ ಒಡೆಯರ್ ಅವರ ಕೃತಿಗಳ ಬಗ್ಗೆ ಒಂದು ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಒಡೆಯರ್ ಅವರ ಅನೇಕ ಕೃತಿಗಳನ್ನು ಶ್ರೀಮತಿ ಸುಕನ್ಯಾ ಅವರು ಮುಂಬೈನ ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟಿದ್ದಾರೆ. ಹೀಗಾಗಿ ಸುಕನ್ಯಾ ಅವರ ಧ್ವನಿ ಪ್ರತಿಧ್ವನಿಗಳು ಮುಂಬೈ ಮತ್ತು ಮೈಸೂರಿನ ನಡುವೆ ನಿರಂತರವಾಗಿ ಸುಳಿದಾಡುತ್ತಿವೆ. ಈ ಶಿಬಿರದಿಂದ ಪ್ರೋತ್ಸಾಹಿತರಾಗಿ ಉತ್ತೇಜಿತರಾಗಿ ಇನ್ನೂ ಹೆಚ್ಚು ಕಲಿಯಬೇಕು, ನಮ್ಮ ವಿದ್ಯಾರ್ಜನೆಯನ್ನು ಮುಂದುವರಿಸಬೇಕು ಎಂಬ ಆಸಕ್ತಿಯಿಂದ ಶ್ರೀಮತಿ ಶ್ಯಾಮಲಾ ರಾಧೇಶ್ ಹಾಗೂ ಶ್ರೀಮತಿ ವೀಣಾ ಶಾಸ್ತ್ರಿ ಅವರು ಮುಂದಾಳತ್ವವನ್ನು ವಹಿಸಿ ಮತ್ತೊಂದು ಶಿಬಿರವನ್ನು ಏರ್ಪಡಿಸಿದ್ದರು. ಈ ಶಿಬಿರವು ಮಾರ್ಚ್ 18ರಿಂದ ಮಾರ್ಚ್ 23ರ ವರೆಗೆ ನಡೆಯಿತು. ಈ ಬಾರಿಯ ಶಿಬಿರದ ಉದ್ದೇಶ ಮೈಸೂರಿನ ಅನೇಕ ವಾಗ್ಗೇಯ ಕಾರರು, ಹಾಗೂ ಅವರ ಕೃತಿಗಳನ್ನು ಪರಿಚಯಿಸುವುದು, ಶಿಷ್ಯರು ಎಷ್ಟು ಉತ್ಸಾಹದಿಂದ ಶ್ರೀಮತಿ ಸುಕನ್ಯಾ ಅವರಲ್ಲಿ ಅರಿಕೆಮಾಡಿಕೊಂಡರೋ ಅದರ ದುಪ್ಪಟ್ಟು ಉತ್ಸಾಹ ಹಾಗೂ ಸಂತೋಷದಿಂದ ಸುಕನ್ಯಾ ಅವರು ಒಂದು ಶಿಬಿರವನ್ನು ನಡೆಸಿಕೊಟ್ಟರು. ಮೈಸೂರಿನ ವಾಗ್ಗೇಯ ಕಾರರುಗಳಾದ ಮೈಸೂರು ಸದಾಶಿವ ರಾಯರು, ಆರ್.ಎನ್. ದೊರೆಸ್ವಾಮಿ, ಯೋಗಾ ನರಸಿಂಹಂ, ಟಿ. ಚೌಡಯ್ಯನವರು.... ಹೀಗೆ 6-7 ವಾಗ್ಗೇಯಕಾರರ ಒಂದೊಂದು ಕೃತಿಗಳನ್ನು ಕಲಿಸಿಕೊಟ್ಟರು. ಕೃತಿಗಳು ಬಹಳ ಕ್ಲಿಷ್ಟ ಹಾಗೂ ಇರುವುದು ಕನ್ನಡ ಮತ್ತು ಸಂಸ್ಕೃತದಲ್ಲಿ. ಕ್ಲಿಷ್ಟವಾದ ಕೃತಿಗಳನ್ನು ಸರಳವಾದ ರೀತಿಯಲ್ಲಿ ಕಲಿಸಿಕೊಡುವುದು ಸುಕನ್ಯಾ ಅವರ ವೈಶಿಷ್ಟ್ಯತೆ. ಕಲಿಸುವ ಆಸಕ್ತಿ ಹಾಗೂ ಕಲಿಯುವ ಆಸಕ್ತಿ ಒಂದಕ್ಕೊಂದು ಪೂರಕವಾಗಿ ಉತ್ತಮ ಮಾರ್ಗದರ್ಶನದಲ್ಲಿ ಕಲಿಯಲು ಅನುಕೂಲವಾಯಿತು. ಈ ಬಾರಿಯೂ ಕಳೆದ ಶಿಬಿರದಂತೆ ಶಿಬಿರದ ಕೊನೆಯ ದಿನದಂದು ವಿದ್ಯಾರ್ಥಿಗಳು ತಾವು ಕಲಿತ ಕೃತಿಗಳನ್ನು ಶ್ರೀಮತಿ ಸುಕನ್ಯಾ ಅವರ ಮಾರ್ಗದರ್ಶನದಲ್ಲಿ ಮೈಸೂರು ಅಸೋಸಿಯೇಷನ್ನಿನಲ್ಲಿ ಹಾಡಿದರು. ಹೀಗಾಗಿ ಆ ಧ್ವನಿಗಳನ್ನು ಮತ್ತೊಮ್ಮೆ ಕೇಳುವ ಅವಕಾಶವಾಯಿತು.



*ಅಸೋಸಿಯೇಶನ್‌ನಲ್ಲಿ ಮಾರ್ಚ್ 30ರಂದು ನಡೆದ ರಾಮನವಮಿ ಪೂಜಾ ಕಾರ್ಯಕ್ರಮದಲ್ಲಿ ಕಲಾವಿಭಾಗದ ಸದಸ್ಯೆಯರಿಂದ ಸಂಗೀತ, ಭಜನೆ ಕಾರ್ಯಕ್ರಮ ನಡೆಯಿತು.*

ಅಂದು ಸಂಜೆ 7.00 ಗಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಮೊದಲಿಗೆ ಗಣಪತಿಯನ್ನು ಕುರಿತ ಮೈಸೂರು ವಾಸುದೇವಾಚಾರ್ಯರು ರಚಿಸಿದ ಕಾನಡ ರಾಗದ ವರ್ಣ ''ವಾರಣಾಸ್ಯಂ ಪ್ರಣಮಾಮಿ...'' ಎಂಬ ಕೃತಿಯನ್ನು ಹಾಡಿದರು. ಗಣಪತಿಯನ್ನು ಕುರಿತು ವರ್ಣಗಳ ರಚನೆ ಬಹಳ ಅಪರೂಪವಾಗಿದೆ. ಇಂತಹ ಒಂದು ಅಪರೂಪದ ಕೃತಿಯಿಂದ ಆರಂಭಿಸಿದರು. ನಂತರ ''ಗಂಭೀರ ನಾಟ''ರಾಗದಲ್ಲಿ ಮೈಸೂರು ಸದಾಶಿವ ರಾಯರು ಕೃತಿ ''ವನಜಾಕ್ಷಿ'' ನಂತರ ''ರಂಜನಿ'' ರಾಗದಲ್ಲಿ ಯೋಗಾ ನರಸಿಂಹಂ... ಅವರ ಕೃತಿ ''ಸದಾ ಸಾರಂಗ ನಯನೆ''... ಮುತ್ತಯ್ಯ ಭಾಗವತರ್ ಅವರ ಕೃತಿ ''ಸಹಜ ಗುಣರಾಮ...'' ಶಂಕರಾಭರಣದಲ್ಲಿ ಹಾಡಿ ರಾಗದಷ್ಟೇ ವಿಸ್ತಾರವಾಗಿ ರಾಮನ ಸಹಜ ಗುಣಗಳನ್ನು ವರ್ಣಿಸಿದರು. ಚೌಡಯ್ಯನವರ ಕೃತಿ ''ಮಹಾತ್ರಿಪುರ ಸುಂದರಿ...'' ಮತ್ತು ಆರ್.ಎನ್. ದೊರೆಸ್ವಾಮಿ ಅವರು ರಚಿಸಿದ ಒಂದು ತಿಲ್ಲಾನವನ್ನು ಹಾಡಿದರು. ಶ್ರೀಮತಿ ಸುಕನ್ಯಾ ಅವರು ದಾಸ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಅವರು ತಮ್ಮ ಶಿಷ್ಯರಿಗೆ ಕಲಿಸಿದ ರಾಗಗಳು ಮನದಟ್ಟಾಗಲು ಸಹಾಯವಾಗುವಂತೆ ಆಯಾಯ ರಾಗಗಳಲ್ಲಿ ದಾಸರ ಒಂದೊಂದು ಕೃತಿಗಳನ್ನು ಬೋಧಿಸಿ ದಾಸ ಸಾಹಿತ್ಯದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಕಡೆಯದಾಗಿ ಅಕ್ಕ ಮಹಾದೇವಿಯ ಒಂದು ವಚನವನ್ನು ಹಾಡಿದರು ಹಾಗೂ ''ಮನಸುಕರಗದೇ ಸ್ವಾಮಿ'' ಮತ್ತು ''ದಾಸರಿಗುಂಟೇ ಭಯ'' ಎಂಬ ಎರಡು ಕೃತಿಗಳನ್ನು ಮನಮಿಡಿಯುವಂತೆ ಹಾಡಿದರು.

ಕೇವಲ ಒಂದು ವಾರದ ಅಲ್ಪಾವಧಿಯಲ್ಲಿ ಇಂತಹ ಕ್ಲಿಷ್ಟವಾದ ಕೃತಿಗಳನ್ನು ಉತ್ತಮ ಮಟ್ಟದಲ್ಲಿ ಹಾಡುವಂತೆ ಕಲಿಸಿರುವುದು ನಿಜಕ್ಕೂ ಸೋಜಿಗ ! ಮರಳು ಗೊಳಿಸಿದ ಇನಿ ದನಿಗಳು ಮೆಲಕು ಹಾಕುವಂತಿದೆ. ''ವಿದ್ಯಾತುರಾಣಾಂ ನಸುಖಂ ನನಿದ್ರಾ...'' ಎನ್ನುವಂತೆ ಹಗಲು ಇರುಳು ನಿದ್ದೆ ನೀರನ್ನು ಬಿಟ್ಟು ಅಭ್ಯಾಸ ಮಾಡಿದ್ದಾರೆ. ಗುರುಗಳು ಅವರ ಸಮಕ್ಕೂ ಶ್ರಮಿಸಿದ್ದಾರೆ. ಈ ಗುರು ಶಿಷ್ಯರ ಸಂಬಂಧ ನೋಡಿದರೆ ಒಂದು ತರಹ ಆನಂದವಾಗುತ್ತದೆ. ಗುರುವೆಂಬ ಧೋರಣೆಯಾಗಲಿ, ಶಿಷ್ಯರೆಂಬ ಅಂಜಿಕೆಯಾಗಲಿ ಕಂಡು ಬರುವುದಿಲ್ಲ. ಪರಸ್ಪರ ಪ್ರೀತಿ ವಿಶ್ವಾಸ, ಆತ್ಮೀಯತೆಯ ಆಳ ವರ್ಣಿಸಲಸದಳ. ಶ್ರೀಮತಿ ಸುಕನ್ಯಾ ಅವರೂ ತಮ್ಮ ಹಸನ್ಮುಖಿತೆ, ಸರಳ ಸೌಜನ್ಯತೆ ಹಾಗೂ ತಮ್ಮ ಸುಶ್ರಾವ್ಯವಾದ ಸಂಗೀತ ಎಲ್ಲಕ್ಕಿಂತ ಹೆಚ್ಚಾಗಿ ತುಂಬು ಹೃದಯದ ಪ್ರೀತಿಯಿಂದ ಎಲ್ಲರ ಮನಸ್ಸನ್ನು ಆಕರ್ಷಿಸಿದ್ದಾರೆ. ಇಂತಹ ಶಿಬಿರಗಳು ಮೇಲಿಂದ ಮೇಲೆ ನಡೆಯಲಿ ಹಾಗೂ ಮರುಳುಗೊಳಿಸುವ ಇನಿದನಿಗಳನ್ನು ಕೇಳುವ ಸೌಭಾಗ್ಯ ನಮಗಾಗಲಿ.

ಮುಂದಿನ ಸಂಚಿಕೆಯಲ್ಲಿ ವಿದ್ಯಾರ್ಥಿಗಳು ತಮ್ಮ ಅನುಭವವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಾರೆ.

- ರಮಾವಸಂತ್

---

Dear Prasad,

I am thankful to you for sending me the March issue of 'Nesaru' which carries a detailed coverage of the Adya Rangacharya Shatamanotsava Theatre Festival. The issue has come off excellently and we all enjoyed the photographs. In fact, the entire festival was organized excellently. We particularly enjoyed the very first evening when the Marathi version of Adya Rangacharya play' Iye Swargachiya Deari' was staged.

With warm regards and good wishes to you and your colleagues, from me and my wife,

Yours sincerely,

***Y.V. Chandrachud***

# ಪ್ರತಿಭಾ ಸ್ಪರ್ಧೆ, ಆಟೋಟ ಸ್ಪರ್ಧೆಯ ಬಹುಮಾನ ವಿನಿಯೋಗದ ಕಾರ್ಯಕ್ರಮ

ದಿನನಿತ್ಯ ಜೀವನದ ಮುಂಚ್ಯೆನ ಪ್ರತಿಯೊಬ್ಬರಿಗೂ ಒಂದು ಕಿರು ಮನರಂಜನೆ, ಒಂದು ಉತ್ಸಾಹದಲ್ಲಿ ತೊಡಗಿಸಿಕೊಳ್ಳಬೇಕಾದ್ದು ಅವಶ್ಯಕ. ಹೆಂಗಸರಿಗೆ ಮನೆಯ ಕೆಲಸವಾಗಲಿ, ಗಂಡಸರಿಗೆ ಆಫೀಸಿನ ಕೆಲಸವಾಗಲಿ, ಮಕ್ಕಳಿಗೆ ಸ್ಕೂಲಿನ ದಿನನಿತ್ಯ ಜೀವನವಾಗಲಿ, ಇದಲ್ಲದೆ ಬೇರೆಯೊಂದು ತಾತ್ಕಾಲಿಕ ಬದಲಾವಣೆ ಬೇಕೇಬೇಕು ಅಂತ ಪ್ರತಿಯೊಬ್ಬರಿಗೂ ಅನ್ನಿಸುತ್ತದೆ. ಇಂಥ ಒಂದು ಸದವಕಾಶ ಮೈಸೂರು ಅಸೋಸಿಯೇಶನ್ ಮಾಡಿಕೊಟ್ಟಿತ್ತು.



ಕು. ಪ್ರಣಯ ಡಾ. ಶ್ರೀನಿವಾಸ್ ಅವರಿಂದ ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸುತ್ತಿರುವುದು. ಪಕ್ಕದಲ್ಲಿ ಶ್ರೀಮತಿ ಪುಷ್ಪಾ ರಾವ್

ಜನವರಿ 31 ಪ್ರತಿಭಾ ಸ್ಪರ್ಧೆ ಮತ್ತು ಫೆಬ್ರವರಿ 1, ಆಟೋಟ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಲ್ಲಿ 5 ವರ್ಷದೊಳಗಿನ ಪುಟಾಣಿ ಮಕ್ಕಳಿಂದ ಹಿಡಿದು, 60 ವಸಂತಗಳನ್ನು ದಾಟಿದ ಹಿರಿಯರು ಭಾಗವಹಿಸಿದ್ದರು. ಆ ಎರಡು ದಿನಗಳ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ ಮಕ್ಕಳಿಗೂ ಮತ್ತು ಹಿರಿಯರಿಗೂ ಮಾರ್ಚ್ 19 ರಂದು ಬಹುಮಾನ ವಿನಿಯೋಗ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಅಂದಿನ ಕಾರ್ಯಕ್ರಮ ಅಂದರೆ ಮಾರ್ಚ್ 19 ಮೈಸೂರು ಅಸೋಸಿಯೇಷನ್ ಮೊದಲನೆ ಮಾಳಿಗೆಯಲ್ಲಿ 7.30ಕ್ಕೆ ಸಾಯಂಕಾಲ ಶುರುವಾಯಿತು.

ಶ್ರೀಮತಿ ಲಕ್ಷ್ಮಿ ಸೀತಾರಾಂ ಅಂದಿನ ಕಾರ್ಯಕ್ರಮವನ್ನು ನಿರ್ವಹಿಸಿದರು. ಅವರು ಮೊದಲು ನೆರೆದಿದ್ದ ಸಭಾಸದರಿಗೂ ಅವರ ಸ್ನೇಹಿತರು, ಬಂಧು ಬಳಗದವರಿಗೂ ಆದರದ ಸ್ವಾಗತವನ್ನು ಕೋರಿದರು.

ನಂತರ ಬಹುಮಾನ ವಿತರಣೆಯನ್ನು ಅಸೋಸಿಯೇಷನ್‌ನ ಉಪಾಧ್ಯಕ್ಷ ಡಾ. ಎಚ್. ಎಸ್. ಶ್ರೀನಿವಾಸ್‌ರವರು ಮಾಡಿದರು. ಮೊದಲು ಪುಟ್ಟ ಮಕ್ಕಳಿಗೂ, ನಂತರ ಹಿರಿಯರಿಗೂ ಬಹುಮಾನ ವಿನಿಯೋಗ ಕಾರ್ಯಕ್ರಮ ನಡೆಯಿತು.

ಇದಾದ ನಂತರ ಪುಟ್ಟಮಕ್ಕಳಿಂದ ಒಂದು ಚಿಕ್ಕ ಮನೋರಂಜನಾ ಕಾರ್ಯಕ್ರಮ ನಡೆಯಿತು. ಕೃತಿಕಾ ಉಪಾಧ್ಯಾಯ, ಮೈತ್ರಿ ರಾಧೇಶ್, ಪ್ರಿಥ್ವಿ ಪೂಜಾರಿ, ಕ್ಷಮಾ ಉಪಾಧ್ಯಾಯ ಮತ್ತು ಇನ್ನು ಕೆಲವು ಮಕ್ಕಳುಗಳಿಂದ ಶ್ಲೋಕ, ಹಾಡು, ಜಾನಪದ ನೃತ್ಯ, ಭರತನಾಟ್ಯ ಹೀಗೆ ಕಾರ್ಯಕ್ರಮ ನಡೆಯಿತು. ಶ್ರೀಮತಿ ಪುಷ್ಪ ರಘುನಾಥ್ ಅಂದಿನ ಕಾರ್ಯಕ್ರಮಕ್ಕೆ ಸಹಾಯ ನೀಡಿದರು.

ಯುಗಾದಿಯು ಎರಡೇ ದಿನಗಳು ಉಳಿದಿದ್ದುದರಿಂದ ಯುಗಾದಿಯ ಹಬ್ಬದ ವಿಶೇಷ ತಿನಸುಗಳಾದ ಹೋಳಿಗೆ, ಪಾಯಸ, ಅಂಬೊಡೆ, ಮಾವಿನಕಾಯಿ ಚಿತ್ರಾನ್ನ, ಕೋಸಂಬರಿ ಮುಂತಾದವುಗಳ ಭೋಜನವನ್ನು ಏರ್ಪಡಿಸಿದ್ದರು. ಪುಷ್ಕಳವಾದ ಭೋಜನವನ್ನು ಮಾಡಿ ಎಲ್ಲರೂ ಸಂತೋಷದಿಂದ ಮನೆಗಳಿಗೆ ತೆರಳಿದರು.

- ಲಕ್ಷ್ಮೀ ಸೀತಾರಾಂ



ಕು. ಕ್ಷಮಾ ಉಪಾಧ್ಯಾಯರಿಂದ ಒಂದು ನಾಟ್ಯ ಕಾರ್ಯಕ್ರಮ

## THE MYSORE ASSOCIATION, BOMBAY

### FORTH COMING PROGRAMMES

| Date | Programme | Time | Venue |
|---|---|---|---|
| 13th April 2004 | Ganesh Pooja & Sahasranaamaarchana | 7.00 p.m. | Ground Flr. |
| 16th April 2004 | Monthly Culture Event - Film Screening | 7.00 p.m. | Auditorium |
| 20th April 2004 | Ganesh Pooja & Sahasranaamaarchana | 7.00 p.m. | Ground Flr. |
| 22nd April 2004 | Akshaya Trithiya Pooja | | |
| | Ganapathi Homa | 5.00 p.m. | |
| | Navagraha Pooja | 6.00 p.m. | Ground Flr. |
| | Ganapathi Sahasranaama | 7.00 p.m. | |
| | Mahamangalaarathi & Prasada Vinayoga | 8.00 p.m. | |
| 26th April 2004 | Play Reading - Mrs. Usha Desai will read one of the Sriranga's play | 7.00 p.m. | Auditorium |
| 27th April 2004 | Ganesh Pooja & Sahasranaamaarchana | 7.00 p.m. | Ground Flr. |


FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

2/16, KABBUR HOUSE,
SION (E),
MUMBAI-400 022.
PHONES : 2407 2984*2409 3573
2407 7750

# ಮತ್ತೂರು ಜೀವನ ಗಾಥೆಯ ನೆನಪು

ಭಾಗ - 3

ಮತ್ತೂರು ಕೃಷ್ಣಮೂರ್ತಿ ಅವರದು ಧೀಮಂತ ವ್ಯಕ್ತಿತ್ವ, ಅವರೊಬ್ಬ ಅಸಾಧಾರಣ ವಾಗ್ಮಿ. ಅವರದು ಬಹುಮುಖ ಪ್ರತಿಭೆ. ಇಪ್ಪತ್ತು ಮೂರು ವರ್ಷ ಲಂಡನ್‌ದಲ್ಲಿದ್ದು ಭಾರತೀಯ ಸಂಸ್ಕೃತಿಯನ್ನು ಪಾಶ್ಚಾತ್ಯ ಲೋಕಕ್ಕೆ ಪರಿಚಯಿಸಿದ ಸಾಂಸ್ಕೃತಿಕ ರಾಯಭಾರಿ ಅವರು ಮತ್ತೂರು ಅವರ ಜೀವನ ಸಾಧನೆಗಳನ್ನು ಐದಾರು ಕಂತುಗಳಲ್ಲಿ 'ನೇಸರು'ವಿನಲ್ಲಿ ಪ್ರಕಟಿಸಲಾಗುವುದು. ಡಾ. ಜಿ.ಎಸ್. ಉಪಾಧ್ಯ ಅವರು ಈ ಲೇಖನ ಮಾಲೆಯನ್ನು ಸಿದ್ಧಪಡಿಸಿದ್ದಾರೆ.

ಸಾಹಿತ್ಯದಲ್ಲಿ ನಿಮಗೆ ಆಸಕ್ತಿ ಮೂಡಿದ್ದು ಹೇಗೆ?

ಬಾಲ್ಯದಲ್ಲಿಯೇ ನನಗೆ ವೇದ, ಉಪನಿಷತ್ತು, ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಮೂಡಿತು. ಮೊದಲಿನಿಂದಲೂ ನಾನು ಬರಹಗಾರನಾಗಬೇಕು ಎಂಬ ಆಸೆ ಬಲವಾಗಿತ್ತು. ತಮಿಳಿನಲ್ಲಿ ಕಲ್ಕಿ ಕೃಷ್ಣಮೂರ್ತಿ ಬಹಳ ಒಳ್ಳೆಯ ಕಾದಂಬರಿಕಾರರು ಒಳ್ಳೆಯ ಪತ್ರಕರ್ತ ಸಹ. ಗಾಂಧೀಜಿಯೇ ಅವರ ಬರವಣಿಗೆಯ ಕೇಂದ್ರ ಬಿಂದುವಾಗಿದ್ದರು. ಗಾಂಧಿ ಅವರ ಜೀವನ ಚರಿತ್ರೆಯನ್ನು ಅವರು ತಮಿಳಿನಲ್ಲಿ ಬರೆದಿದ್ದಾರೆ. ಕಲ್ಕಿ ಅವರ ಪ್ರಸಿದ್ಧ ಪತ್ರಿಕೆ. ಅಲೈ ಓಸೈ ಎನ್ನುವ ಕಾದಂಬರಿ ಬರೆಯಲು ಅವರು ಪ್ರಾರಂಭಿಸಿದರು. ನನಗೆ ಆಗ ತಮಿಳು ಓದಲು ಬರುತ್ತಿರಲಿಲ್ಲ. ನಮ್ಮ ಅತ್ತಿಗೆ ಅದನ್ನು ಓದಿ ಹೇಳುತ್ತಿದ್ದರು. ದಿನವೂ ಅವರಿಗೆ ತೊಂದರೆ ಕೊಡಬಾರದೆಂದೆಣಿಸಿ ನಾನೇ ತಮಿಳು ಕಲಿಯಲು ಮುಂದಾದೆ. ನಮ್ಮ ಮನೆ ಮಾತು ಸಂಕೇತಿ ಭಾಷೆ. ಸಂಕೇತಿಯಲ್ಲಿಯೂ ಅರ್ಧಕ್ಕರ್ಧ ತಮಿಳು ಪದಗಳಿರುವುದರಿಂದ ಬಹುಬೇಗ ತಮಿಳು ಕಲಿತೆ. ಕಲ್ಕಿ ಕೃಷ್ಣಮೂರ್ತಿ ಅವರದು. ಪ್ರಗತಿಪರ ದೃಷ್ಟಿಕೋನ. ತಮ್ಮ ಹರಿತವಾದ ಲೇಖನಿಯಿಂದ ಬಾಲ್ಯವಿವಾಹ, ಅಸ್ಪೃಶ್ಯತೆ, ಅನಕ್ಷರತೆ ಮೊದಲಾದ ಸಾಮಾಜಿಕ ಪಿಡುಗುಗಳ ವಿರುದ್ಧ ಬರೆದು ಜನ ಮೆಚ್ಚುಗೆಗೆ ಪಾತ್ರರಾಗಿದ್ದರು.

ಕಲ್ಕಿ ಕೃಷ್ಣಮೂರ್ತಿ ಅವರ 'ಅಲೈ ಓಸೈ' ಕಾದಂಬರಿಯನ್ನು ಮೆಚ್ಚಿಕೊಂಡ ನಾನು ಅದನ್ನು ಕನ್ನಡಕ್ಕೆ ಭಾಷಾಂತರಿಸುವ ಕೆಲಸ ಮಾಡಿದೆ. ಸ್ವತಃ ಕಲ್ಕಿಯವರನ್ನು ಭೇಟಿಯಾದೆ. ನಾನು ಮಾಡಿದ ಅನುವಾದವನ್ನು ಅವರೆದುರು ಓದಿ ತೋರಿಸಿದೆ. ಅವರಿಗೆ ಇಷ್ಟವಾಯಿತು. ಮುಂದೆ ಅದೇ ಕಾದಂಬರಿ 'ಅಲೆಯೊಸಗೆ' ಧಾರಾವಾಹಿಯಾಗಿ ಪ್ರಕಟವಾಗಿ ಬಹಳ ಜನಪ್ರಿಯವಾಯಿತು. ಅನಂತರ ಡಾ. ಅಖಿಲಾರ ಪ್ರಸಿದ್ಧ ತಮಿಳು ಕೃತಿ ಅವಳ ಸಹೋದರಿಯರು ಎಂದು ಅನುವಾದಿಸಿ ಪ್ರಕಟಿಸಿದೆ. ಅನಂತರ ಕೆಲವಾರು ವರ್ಷ ಸಂಯುಕ್ತ ಕರ್ನಾಟಕದಲ್ಲಿ ಉಪಸಂಪಾದಕನಾಗಿ ದುಡಿದೆ. ಸಂಯುಕ್ತ ಕರ್ನಾಟಕದಲ್ಲಿ ಗಾಂಧಿ ವಿಚಾರಧಾರೆಗಳ ಹಿನ್ನೆಲೆಯಲ್ಲಿ ಒಂದು ಅಂಕಣ ಶುರುಮಾಡಿದೆ. ಓದುಗರು ತುಂಬಾ ಮೆಚ್ಚಿಕೊಂಡರು. ಮುಂದೆ ಅದೇ 'ಗಾಂಧಿ ಉಪನಿಷತ್ತು' ಎಂಬುದಾಗಿ ಪ್ರಕಟವಾಯಿತು. ಗೀತೆಯ ಹಿನ್ನೆಲೆಯಲ್ಲಿ ನಾನು ರಚಿಸಿದ 'ಯೋಗಕ್ಷೇಮಂ ವಹಾಮ್ಯಹಂ' ಪುಸ್ತಕವಾಗಿ ಬೆಳಕು ಕಂಡಿತು. ರಾಮಾಯಣ, ಭಾರತ, ಉಪನಿಷತ್ತು ಮೊದಲಾದ ಕೃತಿಗಳನ್ನು ಆಧರಿಸಿ ಸಾಕಷ್ಟು ಬರವಣಿಗೆ ಕೃಷಿ ಮಾಡಿದೆ. ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನನ್ನ ಸುಮಾರು ನಲವತ್ತಕ್ಕಿಂತ ಹೆಚ್ಚು ಕೃತಿಗಳು ಪ್ರಕಟವಾಗಿವೆ.

ಗಾಂಧೀಜಿ ಅವರನ್ನು ಹತ್ತಿರದಿಂದ ಕಾಣುವ ಭಾಗ್ಯ ನನಗೆ ಸಿಕ್ಕಿತ್ತು. ನಾನು ಅವರ ಅನುಯಾಯಿ. ಗಾಂಧೀಜಿ ಅವರ ಆದರ್ಶ ನಮಗೆಲ್ಲ ದಾರಿದೀಪ. ಮುಂದೆ ಗಾಂಧಿ ಸಾಹಿತ್ಯ ಸಂಘದಲ್ಲಿಯೂ ಕೆಲಸಮಾಡಿದೆ. ಗಾಂಧೀಜಿ ಅವರ ವಿಚಾರಗಳನ್ನು ಕರ್ನಾಟಕದ ಸಾವಿರಾರು ಹಳ್ಳಿಗಳಲ್ಲಿ ಬಿತ್ತರಿಸುವ ಮಾತನಾಡುವ ಸುಯೋಗ ನನಗೆ ಸಿಕ್ಕಿತು. ಕವಿ ಕುಮಾರ ವ್ಯಾಸನನ್ನು ಮನೆ ಮನೆಗೆ ಮನಮನಕ್ಕೆ ಮುಟ್ಟಿಸುವ ಕೆಲಸವನ್ನು ಕಳೆದ ಕೆಲವು ದಶಕಗಳಿಂದ ಮಾಡುತ್ತ ಬಂದಿದ್ದೇನೆ. ಕನ್ನಡದ ಹಿರಿಯ ಸಾಹಿತಿಗಳಾದ ಮಾಸ್ತಿ, ಡಿ.ವಿ.ಜಿ. ಹಾಮಾನಾ, ಭೈರಪ್ಪ, ವಿ.ಸೀ., ಶಿವರಾಮ ಕಾರಂತ, ಶ್ರೀರಂಗ, ಸಿ.ಕೆ. ನಾಗರಾಜರಾವ್, ಜಿ.ಎಸ್.ಎಸ್., ನಿಟ್ಟೂರು, ಶ್ರೀನಿವಾಸರಾವ್ ಮೊದಲಾದ ಸಾಹಿತಿಗಳೊಂದಿಗೆ ನನಗೆ ನಿಕಟ ಸಂಪರ್ಕವಿತ್ತು. ಇವರೆಲ್ಲ ಲಂಡನ್‌ದ ಭಾರತೀಯ ವಿದ್ಯಾಭವನಕ್ಕೆ ಬಂದು ಹೋಗಿದ್ದಾರೆ.

ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಹಿಂದಿ, ಇಂಗ್ಲೀಷ್ ಮೊದಲಾದ ಭಾಷೆಗಳ ಸಾಹಿತ್ಯ ಮಾನವಿಕ ವಿಚಾರ ಧಾರೆಗಳನ್ನು ಓದುವ ಅವಕಾಶ ನನಗೆ ಸಿಕ್ಕಿತ್ತು. ನಾನು ಸಾಹಿತ್ಯದ ವಿದ್ಯಾರ್ಥಿಯಲ್ಲದಿದ್ದರೂ ಅಲ್ಲಿ ಕೃಷಿ ಮಾಡಲು ಅವಕಾಶ ಸಿಕ್ಕಿದೆ. ಈ ವಿಷಯದಲ್ಲಿ ನಾನು ಅದೃಷ್ಟ ಶಾಲಿ.

ನೀವು ಎಂದೂ ಮರೆಯಲಾಗದ ಘಟನೆಗಳಾವವು?

ನಿಮ್ಮ ಪ್ರಶ್ನೆ ಬಹಳ ಚಿಕ್ಕದು. ಇದಕ್ಕೆ ಉತ್ತರ ಬಹಳ ದೊಡ್ಡದು. ನೂರಾರು ಅಂಥ ನೆನಪುಗಳನ್ನು ನಾನು ನಿಮ್ಮೊಂದಿಗೆ ಈಗ ಹಂಚಿಕೊಳ್ಳಬಲ್ಲೆ. ಸಿರಿ ಬಂದಿದೆ. ಉರಿ ಸಂದಿದೆ. ಕಷ್ಟ ಸುಖ ಎರಡನ್ನು ನಾನು ಅನುಭವಿಸಿದವನೇ ನನ್ನ ಸಾಧನೆಗಳ ಶ್ರೇಯ ಅನೇಕರಿಗೆ ಸಲ್ಲುತ್ತದೆ.

ಮರೆಯಲಾಗದ ವಾರಾನ್ನ

ನಾನು ಚಿಕ್ಕವನಿದ್ದಾಗ ಕಿತ್ತು ತಿನ್ನುವ ಬಡತನವಿತ್ತು. ಹೀಗಾಗಿ ಭಿಕ್ಷಾನ್ನ ವಾರಾನ್ನ ಮಾಡಿಕೊಂಡು ಓದಬೇಕಿತ್ತು. ಈಗಿನವರಿಗೆ ಅದರ ಕಲ್ಪನೆಯೂ ಬರಲಿಕ್ಕಿಲ್ಲ. ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ದಿನ ಊಟ ಹಾಕುತ್ತಿದ್ದರು. ಕೆಲವು ದಿನ ಊಟವಿಲ್ಲದೆ ದಿನದೂಕಿದ್ದೂ ಉಂಟು. ವಾರಾನ್ನದ ವಿಚಾರಗಳನ್ನು ನಾನೆಂದೂ ಮರೆಯಲಾರೆ. ನನ್ನ ಜೀವನದಲ್ಲಿ ನಾನು ಸರಿಯಾದ ಪಾಠ ಕಲಿಯಲು ಮನುಷ್ಯ ಸ್ವಭಾವದಲ್ಲಿನ ಔದಾರ್ಯದ ಬಗೆಗೆ ತಿಳಿಯಲು ಸಹಾಯವಾಗಿದೆ ಈ ಘಟನೆ. ನನ್ನ ಜತೆಯಲ್ಲಿ ಮೂವರು ಕನ್ನಡ ಕಲಿಯುತ್ತಿದ್ದರು. ಕನ್ನಡದಲ್ಲಿ ನನಗೆ ಹೆಚ್ಚು ಅಂಕ ಸಿಗುತಿತ್ತು. ನನ್ನ ಸಹಪಾಠಿಗಳಿಗೆ ಕನ್ನಡ ಹೇಳಿಕೊಡುವ ಕೆಲಸವನ್ನು ನಮ್ಮ ಮೇಷ್ಟರು ಹಚ್ಚಿದರು. ಶಾಲೆ ಬಿಟ್ಟ ಅನಂತರ ಈ ಹುಡುಗರಿಗೆ ನಾನು ಕನ್ನಡ ಕಲಿಸುತ್ತಿದ್ದೆ. ನನಗೆ ಶುಕ್ರವಾರ ವಾರಾನ್ನದ ಮನೆ ಇರಲಿಲ್ಲ. ಸಹಪಾಠಿಗಳಿಗೆ ಗೊತ್ತಾಗಿ ವ್ಯವಸ್ಥೆ ಮಾಡಿದರು. ಅವರೇನು ಶ್ರೀಮಂತರಾಗಿರಲಿಲ್ಲ. ಊಟದ ಹೊತ್ತಿಗೆ ನಾವೆಲ್ಲ ಸಾಲಾಗಿ ಕೂಡುತ್ತಿದ್ದೆವು. ಮನೆ ಮಕ್ಕಳಿಗೆಲ್ಲ ಬಡಿಸಿದ ನಂತರ ನನಗೆ ಬಡಿಸುತ್ತಿದ್ದರು. ಆ ಮಹಾ ತಾಯಿ ಪ್ರತಿನಿತ್ಯವೂ ತಮ್ಮ ಮಕ್ಕಳಿಗೆ ತಂಗಳನ್ನ ಬಡಿಸಿ ನನಗೆ ಬಿಸಿ ಅನ್ನ ಬಡಿಸುವುದು ಗೊತ್ತಾಗಿ ಒಂದು ದಿನ ಹೀಗೇಕೆ ಎಂದು ಆ ತಾಯಿಯಲ್ಲಿ ಪ್ರಶ್ನೆ ಮಾಡಿದೆ. ಆಗ ಆಕೆ ''ಕೃಷ್ಣಮೂರ್ತಿ ಇವರಿಗೆಲ್ಲ... ಈ ಮಕ್ಕಳಿಗೆಲ್ಲ ನಾನಿದ್ದೀನಿ. ಇವರಿದ್ದಾರೆ. ಇವರಿಗೆ ಏನಾದರೂ ಆದರೆ ನೋಡಿಕೊಳ್ಳಲು ನಾ ಇದ್ದೀನಿ. ನೀನು ಪಾಪ ಮತ್ತೂರಿಂದ ಓದೋಕೆ ಅಂತ ಇಲ್ಲಿಗೆ ಬಂದಿದ್ದೀಯೆ. ನಿನ್ನನ್ನು ಇಲ್ಲಿ ಸರಿಯಾಗಿ ನೋಡಿಕೊಳ್ಳುವವರಿಲ್ಲ. ನಿನಗೆ ಜಡ ಜಾಪತ್ತು ಬಂದರೆ ಗತಿ ಏನು? ಎಂದರು. ಕಣ್ಣಲ್ಲಿ ನೀರು ಬಂತು ನನಗೆ... ಲೋಕದಲ್ಲಿ ಇಂಥ ಉದಾರಿಗಳೂ ಇದ್ದಾರಲ್ಲ ಅನ್ನಿಸಿತು. ತಮ್ಮ ಮಕ್ಕಳ ಹಿತವನ್ನು ಬಲಿಕೊಟ್ಟು, ಯಾರೋ ಏನೋ ವಾರಕ್ಕೆ ಬಂದ ಹುಡುಗ ನನ್ನು ಮನೆಯ ಮಕ್ಕಳಿಗಿಂತ ಹೆಚ್ಚು ಕಾಳಜಿಯಿಂದ ನೋಡಿಕೊಳ್ಳುವವರೂ ಇದ್ದಾರಲ್ಲ ಅನ್ನಿಸಿತು. ಈಗ ಆ ದಿನಗಳನ್ನು ನೆನೆದುಕೊಂಡರೆ ನಮ್ಮ ಸಂಸ್ಕೃತಿ ನಾಗರಿಕತೆ ಆ ತಾಯಿಯ ಹೃದಯ ವೈಶಾಲ್ಯ, ಜನರ ಪ್ರೀತಿ ವಿಶ್ವಾಸವನ್ನು ಅರ್ಥ ಮಾಡಿಕೊಳ್ಳಬಹುದು.

ಗಾಂಧೀಜಿ ಸ್ಮರಣೆ : ಅದು 1944ನೇ ಇಸ್ವಿ. ನನ್ನ ಜೀವನದಲ್ಲಿ ಒಂದು ಮುಖ್ಯವಾದ ತಿರುವು. ಆಗ ನನಗೆ 16 ವರ್ಷ. ಗಾಂಧೀಜಿ ಆಗ ಮದ್ರಾಸಿಗೆ ಬರುವವರಿದ್ದರು. ನಿಟ್ಟೂರು ಶ್ರೀನಿವಾಸರಾಯರು ಬರೆದ ಗಾಂಧೀಜಿ ಆತ್ಮಕಥೆ ಓದಿ ನಾನು ಬಹಳವಾಗಿ ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾಗಿದ್ದೆ. ಗಾಂಧೀಜಿ ಅವರನ್ನು ಒಮ್ಮೆ ನೋಡಬೇಕು ಎಂಬ ಆಸೆ ಬಲವಾಗಿತ್ತು. ಇದೇ ಹೊತ್ತಿಗೆ ಹಿಂದೂ ಪತ್ರಿಕೆಯಲ್ಲಿ ಸ್ವಯಂ ಸೇವಕರು ಬೇಕು ಎನ್ನುವ ಜಾಹೀರಾತಿಗೆ ಸ್ಪಂದಿಸಿ ಅರ್ಜಿ ಹಾಕಿದೆ. ಮಾರನೇ ದಿನ ಸಂದರ್ಶನ. ಬೆಳಿಗ್ಗೆ ನಸುಕು ಹರಿಯುವ ಮುನ್ನವೇ ಹೋಗಿದ್ದೆ. ಆದರೆ ಆ ಹೊತ್ತಿಗಾಗಲೇ ಸಾವಿರಾರು ಜನ

ಸಾಲಿನಲ್ಲಿ ನಿಂತಿದ್ದರು. ಮೈಲು ಗಟ್ಟಲೆ ಸರತಿ ಸಾಲಿನಲ್ಲಿ ನಾನೂ ನಿಂತೆ. ಸಂದರ್ಶನವಿದ್ದದ್ದು ಮದ್ರಾಸಿನ ಮಾಂಬಲಂದಲ್ಲಿ ಮಧ್ಯಾಹ್ನದ ಹೊತ್ತಿಗೆ ನನ್ನ ಸರದಿ ಬಂದಿತು. ಅಲ್ಲಿ ಹೋದರೆ ತೀವ್ರವಾದ ನಿರಾಸೆ ಕಾದಿತ್ತು. ಹಿಂದಿ ಮಾತನಾಡಲು ಬಂದವರು ಮಾತ್ರ ಅವಕಾಶ ಪಡೆದುಕೊಂಡರು. ನಾನು ಗಾಂಧೀಜಿ ಅವರ ಅಭಿಮಾನಿ. ಅವರನ್ನು ಕಾಣಬೇಕು ಎಂದು ಪರಿಪರಿಯಾಗಿ ಬೇಡಿಕೊಂಡು ಅತ್ತೆ. ಆದರೂ ಅವರಿಗೆ ಕರುಣೆ ಬರಲಿಲ್ಲ. ನಾನು ಹಿಂದಿ ಕಲಿತುಕೊಂಡು ಬಂದರೆ ಸ್ವಯಂಸೇವಕನಾಗಿ ತೆಗೆದುಕೊಳ್ಳುವಿರಾ ಎಂದು ಕೇಳಿದೆ. ಅವರು 15 ದಿನಗಳಲ್ಲಿ ಹಿಂದಿ ಕಲಿಯಲು ಸಾಧ್ಯವೇ ಎಂಬ ಮುಖಭಾವದಿಂದ ನನ್ನನ್ನು ಆಚೆಗೆ ಕಳುಹಿಸಿದರು. ನನಗೂ ಹಠ ಬಂದಿತು. ನಮ್ಮ ಮನೆಯ ಪಕ್ಕದಲ್ಲಿ ಒಬ್ಬರು ಹಿಂದಿ ಕಲಿಸುವ ಶಿಕ್ಷಕಿ ಇದ್ದರು. ಅವರ ನೆರವಿಂದ ಹದಿನೈದು ದಿನಗಳ ಸತತ ಪ್ರಯತ್ನದಿಂದ ಹಿಂದಿ ಐದಾರು ಮಾರ್ಗದರ್ಶಿ ಪುಸ್ತಕಗಳನ್ನು ಬಾಯಿ ಪಾಠ ಮಾಡಿ ಕಲಿತೇ ಬಿಟ್ಟೆ. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಮುಖ್ಯ ಕಾರ್ಯದರ್ಶಿ ಸತ್ಯನಾರಾಯಣ ಅವರನ್ನು ಭೇಟಿಯಾದೆ. ನನಗೆ ಬೈದವರೂ ಅವರೇ. ಅವರ ಸಮ್ಮುಖದಲ್ಲೇ ಹಿಂದಿಯಲ್ಲಿ ಮಾತನಾಡಿದೆ. ಅವರಿಗೂ ಕನಿಕರವಾಗಿರಬೇಕು. ಅಲ್ಲಿದ್ದ ತಮ್ಮ ಸಹಾಯಕರಿಗೆ ಹಿಂದಿಯಲ್ಲಿ ಈ ಹುಡುಗನಿಗೆ ಬಾಪೂಜಿಯ ಕೋಣೆಯಲ್ಲೇ ಕೆಲಸ ಕೊಡೋಣ ಎಂದರು. ನನಗೆ ಅತೀವ ಸಂತೋಷವಾಯಿತು. ನನಗೆ ಗಾಂಧೀಜಿ ಚಿತ್ರವಿದ್ದ ವಿಶೇಷ ಬ್ಯಾಡ್ಜ್ ಕೊಟ್ಟರು. ನನಗೆ ಎಲ್ಲಿಲ್ಲದ ಪುಳಕ, ಆನಂದ, ರಾಷ್ಟ್ರಕ್ಕೆ ರಾಷ್ಟ್ರವೇ ಗಾಂಧೀಜಿ ಅವರ ಬೆನ್ನು ಹತ್ತಿತ್ತು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಅತಿರಥ ಮಹಾರಥಿಗಳೆಲ್ಲ ಮದ್ರಾಸಿಗೆ ಬಂದರು. ನೆಹರೂ, ಆಚಾರ್ಯ ಕೃಪಲಾನಿ, ರಾಜಾಜಿ, ಆಜಾದ್, ಸರ್ದಾರ್ ಪಟೇಲ್ ಇನ್ನನೇಕರು ಬಂದರು. ಗಾಂಧೀಜಿ 35 ದಿನಗಳ ಕಾಲ ಅಲ್ಲಿದ್ದರು. ಅವರೊಂದಿಗೆ ಓಡಾಡಿದ ಆ ದಿನಗಳನ್ನು ನೆನಪಿಸಿಕೊಂಡರೆ ಈಗಲೂ ರೋಮಾಂಚನವಾಗುತ್ತದೆ. ಗಾಂಧೀಜಿ ಅವರಿಗೆ ನಮ್ಮಿಂದಾದ ಸೇವೆ ಸಲ್ಲಿಸಿದೆವು. ಹಾಗೆ ಸೇವೆಗೈದ ನಮಗೆಲ್ಲ ಒಂದು ಚರಕ ಹಾಗೂ ಪ್ರಮಾಣ ಪತ್ರ ಕೊಟ್ಟರು. ಹೀಗೆ ಗಾಂಧೀತನ, ಗಾಂಧಿತತ್ವವನ್ನು ಮೈಗೂಡಿಸಿಕೊಳ್ಳಲು ಸುವರ್ಣಾವಕಾಶ ದೊರೆತುದು ನನ್ನ ಬದುಕಿನ ಬಹು ದೊಡ್ಡ ಭಾಗ್ಯ ಎಂದುಕೊಂಡಿರುವೆ.

**ನ್ಯಾಯಾಲಯದ ಕಟಕಟೆಯಲ್ಲಿ:**

ಲಂಡನ್‌ನ ನ್ಯಾಯಾಲಯದಲ್ಲಿ ನಡೆದ ಘಟನೆ ಇದು. ಇದನ್ನು ನಾನೆಂದಿಗೂ ಮರೆಯಲಾರೆ. ಒಬ್ಬ ದಕ್ಷಿಣ ಭಾರತದ ಆಸಾಮಿ ಲಂಡನ್‌ನಲ್ಲಿ ವಾಸವಾಗಿದ್ದ. ತಂದೆ ತಾಯಿ ಬಂಧು-ಮಿತ್ರರ ಸಮಕ್ಷಮದಲ್ಲಿ ಮದುವೆಯಾಗಿದ್ದ. ವೃತ್ತಿಯಲ್ಲಿ ಲಂಡನ್‌ದಲ್ಲಿ ಡಾಕ್ಟರ್ ಬೇರೆ ! ಇದ್ದ ಮನೆಯನ್ನು ಪತ್ನಿಗೆ ತಿಳಿಯದಂತೆ ಮಾರಿ ಡೈವೋರ್ಸ್‌ಗೆ ಅರ್ಜಿಹಾಕಿದ. ಹುಡುಗಿ ಪಾಪದವಳು. ಆಕೆಯ ಪರವಾಗಿ ವಾದಿಸುವ ವಕೀಲರು ನನ್ನ ಪರಿಚಯದವರೇ. ಆಕೆಗೆ ನ್ಯಾಯ ಸಿಗುವಂತೆ ಮಾಡುವುದು ನಮ್ಮ ಕರ್ತವ್ಯವಾಗಿತ್ತು. ಚಿಕ್ಕ ಮಕ್ಕಳು ಬೇರೆ ಇದ್ದಾರೆ. ವಕೀಲರು ಮಾತನಾಡುತ್ತಾ ನಾನು ಕೋರ್ಟಿನಲ್ಲಿ ವಾದ ಮಂಡಿಸಲು ಪೂರಕವಾದ ವಿಚಾರಗಳೇನಾದರೂ ನಿಮ್ಮ ಧರ್ಮದಲ್ಲಿದೆಯೆ? ಎಂದು ಕೇಳಿದರು. ಆ ವಕೀಲರು ಇಂಗ್ಲೀಷರು. ಹಿಂದೂ ಧರ್ಮದ ಬಗೆಗೆ, ನಮ್ಮ ವಿವಾಹ ಕ್ರಮದ ಬಗೆಗೆ ಏನೇನೂ ಅರಿಯರು. ಆದರೆ ತೊಂದರೆಗೊಳಗಾದ ಹುಡುಗಿಗೆ ನ್ಯಾಯವೊದಗಿಸುವ ಪ್ರಯತ್ನ ನಡೆಸಿ ನಮ್ಮ ವಿವಾಹ ಕ್ರಮದ ಬಗೆಗೆ ಪ್ರಶ್ನಿಸಿದರು. ಮದುವೆಯಲ್ಲಿ ಏನಾದರೂ ಪ್ರಮಾಣ ಮಾಡುತ್ತಾರೆಯೇ ಎಂದು ಕೇಳಿದರು. ನಾನು ಇದೆಯಲ್ಲ, ನಮ್ಮ ಹಿಂದೂ ಧರ್ಮದ ಪ್ರಕಾರ ಲಗ್ನದ ಹೊತ್ತಿನಲ್ಲಿ ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ ಎಂದು ಗಂಡು-ಹೆಣ್ಣು (ಸತಿ ಪತಿಯರು) ಪ್ರಮಾಣ ಮಾಡುತ್ತಾರೆ ಎಂದೆ. ಆ ವಕೀಲರಿಗೆ ಬಹಳ ಸಂತೋಷವಾಯಿತು. ನ್ಯಾಯಾಲಯದಲ್ಲಿ ತಾನು ಗೆದ್ದೇ ಬಿಟ್ಟೆ ಎಂಬಷ್ಟು ಖುಷಿಪಟ್ಟರು. (ನಮ್ಮ ವಿವಾಹ ಮಂತ್ರದಲ್ಲಿ ಧರ್ಮದಲ್ಲಿ, ಎಂದರೆ ನನ್ನ ಕರ್ತವ್ಯವನ್ನು ಮಾಡುವುದರಲ್ಲಿ, ಅರ್ಥದಲ್ಲಿ ಎಂದರೆ ಹಣಕಾಸು ಇತ್ಯಾದಿ ವ್ಯವಹಾರ ಮಾಡುವುದರಲ್ಲಿ, ಕಾಮದಲ್ಲಿ, ಎಂದರೆ ನನ್ನ ಇಷ್ಟಾರ್ಥವನ್ನು ಪೂರೈಸಿಕೊಳ್ಳುವುದರಲ್ಲಿ, ನಾತಿ ಚರಾಮಿ ಎಂದರೆ ನಿನ್ನ ಮಾತನ್ನು ಮೀರಿ ಹೋಗುವುದಿಲ್ಲ, ನಿನ್ನನ್ನು ಕೇಳಿಯೇ ಮಾಡುತ್ತೇನೆ. ಎಂಬ ಅರ್ಥವಿದೆ) ಈ ವಿಷಯದಲ್ಲಿ ನೀವು ಕೋರ್ಟಿಗೆ ಬಂದು ಸಾಕ್ಷಿ ಹೇಳುವಿರಾ ಎಂದು ಕೇಳಿದರು. ಅದಕ್ಕೇನಂತೆಯ ಅಗತ್ಯವಾಗಿ ಇದ್ದುದನ್ನು ಇದ್ದಂತೆ ಹೇಳುವೆ ಎಂದೆ. ಆ ವಕೀಲರಿಗೂ ಖುಷಿಯಾಯಿತು.

ಒಂದು ನಿರ್ಧಾರವಾದ ದಿನದಂದು ನಾನು ಕೋರ್ಟಿಗೆ ಹೋದೆ. ನ್ಯಾಯಾಲಯದಲ್ಲಿ ತನ್ನ ಎರಡು ಮಕ್ಕಳೊಡನೆ ಆ ಮುಗ್ಧ ಮಗಳು ಬೇಸರದಿಂದ ನಿಂತಿರುವುದನ್ನು ಕಂಡು ನನ್ನ ಕರುಳು ಚುರ್ರೆಂದಿತು. ಅವಳ ಗಂಡನನ್ನು ನೋಡಿ ಅಮ್ಮಾ ತಾಯಿ, ಭಾರತ ಮಾತೆ ಇಂತವರೂ ನಿನ್ನ ಮಕ್ಕಳಾಗಬೇಕೇ ಎಂದು ವಿಷಾದ ವ್ಯಕ್ತ ಪಡಿಸಿದೆ. ನಮ್ಮ ನಾಡಿನ ಹುಡುಗರು ಹೀಗೇಕೆ ದಾರಿ ತಪ್ಪುತ್ತಾರೆ ಎಂದು ನೊಂದುಕೊಂಡೆ. ನನ್ನ ಸ್ನೇಹಿತರಾಗಿದ್ದ ವಕೀಲರು ಹಿಂದೂ ವಿವಾಹ ಪದ್ಧತಿಯನ್ನು ಪ್ರಸ್ತಾಪಮಾಡಿ ಪ್ರಮಾಣದ ವಿಚಾರವನ್ನು ಹೇಳಿ ನನ್ನ ಕಡೆಗೆ ಬೊಟ್ಟು ಮಾಡಿ ಇವರನ್ನು ಕೇಳಿ ಎಂದರು. ಮ್ಯಾಜಿಸ್ಟ್ರೇಟರು ಇಂಥ ಪ್ರತಿಜ್ಞೆ ಇದೆಯೋ ಇಲ್ಲವೋ ಎಂದು ಕೇಳಿದರು. ನಾನು, ಹೌದು, ಯುವರ್ ಆನರ್, ಹೀಗೆ ಒಂದು ವಾಗ್ದಾನವಿದೆ. ಸತಿಪತಿಯರಿಬ್ಬರೂ ಈ ಪ್ರತಿಜ್ಞೆಯನ್ನು ಮಾಡುತ್ತಾರೆ ಎಂದೆ. ನ್ಯಾಯಾಧೀಶರು ತುಸು ಪ್ರಸನ್ನರಾದಂತೆ ಕಂಡು ಬಂದಿತು. ಕಟಕಟೆಯ ಮತ್ತೊಂದು ಕಡೆ ನಿಂತಿದ್ದ ಆತನನ್ನು ''ಕೇಳಿದೆಯಾ ನೀನೂ ಆ ಧರ್ಮದವನು ತಾನೇ'' ''ನೀನು ಹಾಗೆ ಪ್ರಮಾಣ ಮಾಡಿ ನಿನ್ನ ಪತ್ನಿಗೆ ಹೇಳಿಲ್ಲವೇ'' ಎಂದು ಜೋರಾಗಿ ಪ್ರಶ್ನಿಸಿದರು. ಅದಕ್ಕೆ ಆ ಮಹಾಶಯ ಏನೆಂದು ಉತ್ತರಿಸಿದ ಗೊತ್ತೇ? ''ಇಲ್ಲ ನಾನು ಹಾಗೆ ಪ್ರತಿಜ್ಞೆ ಮಾಡಿಲ್ಲ. ನಾನು ಹಾಗೆ ಅವಳಿಗೆ ಹೇಳಿಲ್ಲ. ಬಹುಶಃ ನನ್ನ ಮದುವೆ ಮಾಡಿಸಿದ ಪುರೋಹಿತ ಹಾಗೆ ಪ್ರಮಾಣ ಮಾಡಿದ್ದಾನು ! ಎಂದು ಬಿಟ್ಟ. ಕೇಸು ಬಿದ್ದು ಹೋಯಿತು. ಆ ವ್ಯಕ್ತಿ ಮಹಾ ಕಪಟಿಯಾಗಿದ್ದ. ನನಗಂತೂ ತುಂಬಾ ಬೇಸರವಾಯಿತು. ಅನಂತರ ನಾವೆಲ್ಲ ಸೇರಿ ಆ ಹುಡುಗಿಗೆ ಕೈಲಾದ ಸಹಾಯ ಮಾಡಿದೆವು. ಅದು ಬೇರೆ ಮಾತು. ಮನುಷ್ಯನ ನೀಚತನ ನೋಡಿ ನಾನು ಸಂಕಟಪಟ್ಟೆ.

ತಾಯಿಗೆ ಸಂತೋಷವಾಗಬೇಕು.

ಇನ್ನೊಂದು ಘಟನೆ. ಸರ್ವಜ್ಞನೆಂಬವನು ಗರ್ವದಿಂದಾದವನೇ... ಎಂಬ ಪ್ರಶ್ನೆಗೆ ಅವನೇ ಉತ್ತರ ಹೇಳುತ್ತಾನೆ. ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯಾ ಪರ್ವತವೇ ಆದ' ಎಂಬುದಾಗಿ. 'ಕೆಲವಂ ಬಲ್ಲವರಿಂದ ಕಲ್ತು' ಎಂಬ ಮಾತಿಗೆ ತಾನೇ ಗಣಪತಿಯ ಕುರಿತಾದ ಪ್ರಸಿದ್ಧ ಪದ್ಯವಿದೆಯಲ್ಲ. ದೊಡ್ಡ ದೊಡ್ಡ ವಿದ್ವಾಂಸರೂ ಅದನ್ನು ತಪ್ಪಾಗಿ ಅರ್ಥೈಸುವವರೇ. ಆ ಶ್ಲೋಕವಿಂತಿದೆ.

''ಅಗ ಜಾನನ ಪದ್ಮಾರ್ಕಂ ಗಜಾನನಂ ಅಹರ್ನಿಶಂ
ಅನೇಕದಂ ತಂ ಭಕ್ತಾನಾಂ ಏಕದಂತಂ ಉಪಾಸ್ಮಹೇ''

ನನಗೆ ಈ ಶ್ಲೋಕದ ಅರ್ಥ ತಿಳಿದಿರಲಿಲ್ಲ. 1954ನೇ ಇಸ್ವಿ, ಕಂಚಿ ಪರಮಾಚಾರ್ಯರು ಬೆಂಗಳೂರಿಗೆ ಬಂದಿದ್ದರು. ಅವರದೊಂದು ಉಪನ್ಯಾಸವೂ ಏರ್ಪಾಟಾಗಿತ್ತು. ಕಂಚಿ ಶ್ರೀಯವರು ತಮಿಳಿನಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ಹೇಳುವ ಅವಕಾಶ ಆಗ ನನಗೆ ಸಿಕ್ಕಿತು.

ಪರಮಾಚಾರ್ಯರು ಮೇಲೆ ತಿಳಿಸಿದ ಗಣೇಶ ಸ್ತುತಿಯಿಂದ ತಮ್ಮ ಉಪನ್ಯಾಸ ಆರಂಭಿಸಿದರು. ಸ್ವಾರಸ್ಯಪೂರ್ಣವಾಗಿ ಅದನ್ನು ಬಿಡಿಸಿ ಅರ್ಥ ಹೇಳಿದರು. 'ಅಗ ಜಾನನ' ಎಂಬಲ್ಲಿ 'ಅ' ಎಂದರೆ 'ಇಲ್ಲ' ಎಂದೂ, 'ಗ' ಎಂದರೆ ಗಮಿಸು ಅಥವಾ ಚಲಿಸು ಎಂದೂ ಅರ್ಥ. 'ಅಗ' ಎಂದರೆ ಚಲಿಸದ್ದು ಎಂದು. 'ಚಲಿಸದೇ ಇರುವಂಥದು' ಅಗ ಎಂದರೆ ಬೆಟ್ಟ, ಪರ್ವತ ಎಂದೂ 'ಅಗಜಾ' ಎಂದರೆ ಪರ್ವತಕ್ಕೆ ಹುಟ್ಟಿದ ಮಗಳು ಅವಳು ಪಾರ್ವತಿ. 'ಆನನ' ಎಂದರೆ ಮುಖ. 'ಪದ್ಮಾರ್ಕಂ' ಎಂದರೆ ಸೂರ್ಯನನ್ನು ಕಂಡು ಕಮಲದ ಹೂವಿನಂತೆ ಅರಳಿತು. ಪಾರ್ವತಿಯ ಮುಖ? ಯಾವಾಗ? ಗಜಾನನ, ತನ್ನ ಮಗ ಗಣೇಶನನ್ನು ನೋಡಿದಾಗ, ಅವನ ಕೀರ್ತಿಯನ್ನು ಕಂಡಾಗ, ಅಂತಹ ಪಾರ್ವತಿಯ ಮುಖವನ್ನು ಅರಳಿಸಿದ. ಆ ಗಜಾನನನ್ನು ಅಹರ್ನಿಶಿ ಧ್ಯಾನ ಮಾಡುವೆ. ಇದು ಮೊದಲನೆ ಸಾಲಿನ ಅರ್ಥ. ಇನ್ನು ಎರಡನೆಯ ಸಾಲು. ಗಣಪತಿಯನ್ನು ಹಗಲು ರಾತ್ರಿ ಏಕೆ ಧ್ಯಾನ ಮಾಡಬೇಕು 'ಅನೇಕದಂ ತಂ ಭಕ್ತಾನಾಂ' 'ಅನೇಕದಂ' ಎಂದರೆ ಒಂದಕ್ಕಿಂತ ಹೆಚ್ಚಿನ ವರವನ್ನು ಕೊಡುವ ಶಕ್ತಿ ಇರುವಂಥವನು, ಗಣೇಶನಿಗೆ ಆ ಯೋಗ್ಯತೆ

ಅರ್ಹತೆ ಇದೆಯಂತೆ. ಅದೇಕೆ ಎಂದರೆ ವೇದವ್ಯಾಸರ ವಿಶೇಷ ಕೃತಿರಚನೆಗಾಗಿ ಗಜಾನನ ತನ್ನ ಒಂದು ದಂತವನ್ನೇ ಕೊಟ್ಟ ಎಂಬ ಕಥೆಯಿದೆ. ದಂತವೇ ಏಕೆ ಬೇಕಾಯಿತೆಂದರೆ, ಭಗವಂತನು ಸೃಷ್ಟಿಯಲ್ಲಿ ಪ್ರತಿಜೀವಿಗೂ ಮುಖ್ಯವಾದ ಒಂದೊಂದು ಅಂಗವನ್ನು ಕೊಟ್ಟಿರುತ್ತಾನೆ. ಅದಕ್ಕೆ ಜೀವಾಂಗ ಯಾ ಮರ್ಮಾಂಗ ಎಂದು ಹೆಸರು. ಆನೆಗೆ ದಂತ, ಕತ್ತೆಗೆ ಬೆನ್ನಿನ ನರ, ಕುದುರೆಗೆ ಕಾಲು, ಪಕ್ಷಿಗಳಿಗೆ ರೆಕ್ಕೆ.... ಇಲ್ಲಿ ಗಣೇಶ ತನಗೆ ಪ್ರಿಯವಾದುದನ್ನು ಮುಖ್ಯವಾದುದನ್ನು ದಾನ ನೀಡಿದ ಹಾಗೆ. ನಾವೂ ಹೀಗೆ ನಡೆದುಕೊಳ್ಳಬೇಕು. ನಮಗೆ ಪ್ರಿಯವಾದುದನ್ನು ದಾನಮಾಡಬೇಕು. ನಮಗೆ ಬೇಡವಾದುದನ್ನು ಸಾಗಹಾಕಿದರೆ ದಾನವಾಗದು. ಇಲ್ಲಿ ಸಂಸ್ಕೃತ ಅರ್ಥೈಸುತ್ತಾರೆ. ನಮ್ಮ ಹಾಗೆ ನಮ್ಮ ಗಣಪತಿಗೂ ಅನೇಕ ಹಲ್ಲುಗಳಿವೆ ಎಂದು ಆರೋಪಿಸಿ ಬಿಡುತ್ತಾರೆ. ಇದರ ಸರಿಯಾದ ಅರ್ಥ ಹೆಚ್ಚಿನವರಿಗೆ ಗೊತ್ತಿಲ್ಲ. 'ತಾಯಿಗೆ ಸಂತೋಷವಾಗಬೇಕು' ಎಂಬ ಆಶಯ ಈ ಶ್ಲೋಕದಲ್ಲಿ ಅದೆಷ್ಟು ಕಾವ್ಯಾತ್ಮಕವಾಗಿ ಬಂದಿದೆ ಎಂದು ನಾನು ಅಚ್ಚರಿಗೊಂಡೆ. ನಾನು ಹೋದೆಲ್ಲೆಲ್ಲ ಈ ಶ್ಲೋಕದ ಸರಿಯಾದ ಅರ್ಥವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ.

ಮಾಸ್ತಿ ಕೊಟ್ಟ ಕಾವ್ಯ ನಾಮ : ನಾನು ಮೊದಲಿನಿಂದಲೂ ನನ್ನ ಹೆಸರನ್ನು ಎಂ. ಆರ್. ಕೃಷ್ಣಮೂರ್ತಿ ಎಂದು ಬರೆಯುತ್ತಿದೆ. ಮತ್ತೂರು ರಾಮಕೃಷ್ಣಯ್ಯ ಕೃಷ್ಣಮೂರ್ತಿ ಎಂಬುದು ನನ್ನ ಪೂರ್ತಿ ಹೆಸರಾಗಿತ್ತು. ನಾನು 'ತಾಯಿನಾಡು' ಪತ್ರಿಕೆಗೆ ಬರೆಯುತ್ತಿದೆ. ಮಾಸ್ತಿ ಅವರ ಜೀವನ ಪತ್ರಿಕೆ ಆಗ ಬಹಳ ಪ್ರಸಿದ್ಧವಾಗಿತ್ತು. ತಮಿಳಿನ ಸುಬ್ರಹ್ಮಣ್ಯ ಭಾರತೀಯಾರ್ ಮಾಸ್ತಿ ಅವರ ಮೆಚ್ಚಿನ ಲೇಖಕರಾಗಿದ್ದರು. ಭಾರತೀಯಾರ್ ಒಂದು ಕಾದಂಬರಿ ಅರ್ಧ ಬರೆಯುವ ಹೊತ್ತಿಗೆ ನಿಧನರಾದರು. ಆ ಕಾದಂಬರಿ ಮಾಸ್ತಿ ಅವರಿಗೆ ತುಂಬಾ ಹಿಡಿಸಿತು. ಅವರು ನನಗೆ ಆ ಕಾದಂಬರಿಯನ್ನು ಅನುವಾದ ಮಾಡಿ ತರಲು ಹೇಳಿದರು. ಅದನ್ನು ಅನುವಾದ ಮಾಡಿ ಕೊಡುವಾಗ ಮಾಸ್ತಿ ಅವರು ನಿನ್ನ ಊರು ಮತ್ತೂರು ಅಲ್ಲವೇನಪ್ಪಾ ಎಂದರು. ನಾನು ಹೌದು ಸಾರ್ ಎಂದೆ. ಸರಿ ಮತ್ತೆ, 'ಮತ್ತೂರು ಕೃಷ್ಣಮೂರ್ತಿ' ಎಂದು ನಿನ್ನ ಹೆಸರು ಇರಲಿ. ಊರಿನ ಹೆಸರು ಸೇರಿಸಿಕೊ ಎಂದರು. ಅಂದಿನಿಂದ ನಾನು 'ಮತ್ತೂರು ಕೃಷ್ಣ ಮೂರ್ತಿ'ಯಾದೆ ಲಂಡನ್ನಿಗೆ ಹೋದಾಗ ನನ್ನ Mathooruನ್ನು ಅಲ್ಲಿಯ ಜನ 'ಮಾಥೂರ್' ಎಂದು ಮಾಡಿದರು. ಉತ್ತರ ಭಾರತದಲ್ಲಿ ಮಾಥೂರ್ ಸರ್ವೇ ಸಾಧಾರಣವಾದ ಸರ್‌ನೇಮ್. ನಾನು ಮೊದಮೊದಲು ಇದು ನಮ್ಮ ಊರಿನ ಹೆಸರು ಎಂದು ಸ್ಪೆಲ್ಲಿಂಗ್ ಸಹ ಹೇಳುತ್ತಿದೆ. ಹೀಗೆ ಎಷ್ಟು ಜನಕ್ಕೆ ಹೇಳುವುದು ! ಎಲ್ಲರೂ ನನ್ನನ್ನು ಉತ್ತರ ಭಾರತದವನೆಂದೇ ಗ್ರಹಿಸಿದರು. ನನಗೆ ಹಿಂದಿಯೂ ಚೆನ್ನಾಗಿ ಬರುತ್ತಿತ್ತು. ಮಾಥೂರ್ ಮುಂದೆ 'ಜೀ' ಸೇರಿಕೊಂಡು 'ಮಾಥೂರ್‌ಜೀ' ಆದೆ. ಜವಾಹರಲಾಲ ನೆಹರೂ ಅವರ ಅಕ್ಕನ ಮಗ ಬಿ.ಕೆ. ನೆಹರೂ ಬ್ರಿಟನ್ನಿನ ಹೈಕಮಿಷನರ್ ಆಗಿದ್ದರು. ನನ್ನ ಮಾತುಕತೆಯಿಂದ ಅವರು ನಾನು ದಕ್ಷಿಣ ಭಾರತದವನೆಂದು ಗುರುತಿಸಿಯೇ ಬಿಟ್ಟರು. ದಕ್ಷಿಣದಲ್ಲಿ ಮಾಥೂರ್ ಸರ್‌ನೇಮ್ ಇಲ್ಲವಲ್ಲ ಎಂದು ಪ್ರಶ್ನಿಸಿದರು. ನನ್ನ ಹೆಸರು ಇಲ್ಲಿ ವಿರೂಪಗೊಂಡ ಕತೆಯನ್ನು ಅವರಿಗೆ ತಿಳಿಸಿದೆ. ಮತ್ತೆ ನೀವೇಕೆ ಹೆಸರನ್ನು ಸರಿಮಾಡಲಿಲ್ಲ ಎಂದು ಕೇಳಿದರು. ಬಿ.ಕೆ. ನೆಹರೂ. ನಾನು, ಪರವಾಗಿಲ್ಲ ಬಿಡಿ ಸಾರ್ ಮತ್ತೂರು ಎಂದರೆ ದಕ್ಷಿಣದವರು ದಾನ ಕಾಣಿಕೆಗಳನ್ನು ಕೊಡುತ್ತಾರೆ. ಮಾಥೂರ್ ಎಂದರೆ ಉತ್ತರ ದೇಶದವರೂ ಕಾಣಿಕೆ ಕೊಡುತ್ತಾರೆ. ನಾನು ಉತ್ತರ ಭಾರತದವನೆಂದು ಭಾವಿಸಿ ಹಾಗೆ ನಾನು ಸರಿಮಾಡ ಹೋದರೆ ಉತ್ತರದವರು ಕಾಣಿಕೆಗಳನ್ನು ಕೊಡದೇ ಹೋಗಬಹುದು ಎಂದೆ. ಅವರಿಗೆ ತುಂಬಾ ಖುಷಿಯಾಯಿತು. ಹಾಗಾದರೆ ಹೀಗೆಯೇ ಇರಲಿ ಹೆಸರು ಸರಿ ಮಾಡುವ ಅವಶ್ಯಕತೆ ಇಲ್ಲ ಎಂದರು. ಅಲ್ಲಿನ ಜನ ಬಹಳ ಪ್ರೀತಿಯಿಂದ 'ಮಾಥೂರ್ ಜೀ' ಎಂದು ನನ್ನನ್ನು ಹಚ್ಚಿಕೊಂಡರು. ಪ್ರೀತಿಸಿದರು. ಒಳಗೊಂಡು ತಮ್ಮವನನ್ನಾಗಿ ಮಾಡಿಕೊಂಡರು. ಬಹಳ ಗೌರವ ಆದರ ತೋರಿಸಿ ಪರದೇಶದಲ್ಲಿಯೂ ನನಗೆ ಎಲ್ಲರೂ ಇದ್ದಾರೆ ಎಂದು ನೆಮ್ಮದಿಯಿಂದ ಅಲ್ಲಿ ಸುಮಾರು 23 ವರ್ಷಗಳಷ್ಟು ದೀರ್ಘಕಾಲ ನಾನು ವಿದ್ಯಾಭವನದ ಸೇವೆ ಬಿಡುವಿಲ್ಲದೆ ತೊಡಗಿ ಕೊಂಡಿರುವಂತೆ ಮಾಡಿದರು. ಇದೆಲ್ಲ ನಾಮದ ಮಹಿಮೆ ಇದ್ದರೂ ಇದ್ದೀತು !

- ಡಾ. ಜಿ. ಎಸ್. ಉಪಾಧ್ಯ

## ವಿಜ್ಞಾನಿಗಳು

ಅಲಯವು ಬಯಲೊಳಗೊ
ಬಯಲು ಆಲಯದೊಳಗೊ
ಎನ್ನುತ್ತ ತಲೆಕೆಡಿಸಿಕೊಂಡು
ನಾನು ನಿನ್ನೊಳಗೋ
ನೀನು ಎನ್ನೊಳಗೋ ಸ್ವಾಮಿ
ಎಂದು ತಲೆ ಕೆರೆಯುತ್ತ
ಯಾರೂ ಇಲ್ಲದ ಕಡೆ
'ಬಾಳೆ' ತಿಂದು ಬಾ ಎಂದಾಗ
ಎಲ್ಲೆಲ್ಲಿಯೂ ಅವನನ್ನೇ ಕಂಡಾಗ
ನೀನು ಎಲ್ಲರೊಳಗೋ ಸ್ವಾಮಿ
ಕಣ್ಣು ಮುಚ್ಚಿದರೂ ಕಾಣುತಿರುವ ಸಾಲು ಸಾಲು
ರೆಪ್ಪೆ ತೆರೆದಾಗ ಬೆಳಕು
ಅದು ಹೇಗೆ ನುಂಗಲಿ 'ಬಾಳೆ'
ಗೋವಿಂದಾ
ಯಾರೂ ಇಲ್ಲದ ಕಡೆಗೆ ಎನ್ನುತ್ತ
ವ್ಯಾಸರ ಮುಂದಿಟ್ಟು ಕೈ ಮುಗಿದ ಕನಕ
ವಿಜ್ಞಾನಿ !
        ಮಾನವ ಜನ್ಮ ದೊಡ್ಡದು
        ಇದ ಹಾಳ ಮಾಡಬೇಡಿ ಹುಚ್ಚಪ್ಪಗಳಿರಾ
        ಜ್ಞಾನ ಇದ್ದೇ ಇದೆ
        ಹೊಸದೆಂಬುದೇ ವಸುಂಧರೆಯೊಳಿಲ್ಲ
        ಹುಡುಕಿ ತೆಗೆಯುವುದು ಮಾತ್ರ ಬೇಕು
        ಹುಡುಕಿ ಹುಡುಕಿ ತೆಗೆದು ಹಂಚುವುದೇ
        ವಿಜ್ಞಾನ !
ತುಂಬು ಗೋಪಾಳ ಬುಟ್ಟಿ, ಹಂಚಿ ಬಿಡುವೆ
ನಿನಗೆಷ್ಟು ಬೇಕು ಗೋವಿಂದಾ
ಎನ್ನುತ್ತ ಬಿದ್ದೆದು ಕಾಳು ಸಾಕೇ ಸಾಕೆಂದರೂ
ಕೇಳಿಯೂ ಕೇಳದ ಕಿವುಡರ ಮನೆಯ
ಬಾಗಿಲ ಒಳಚಿಲಕ ಹಾಕುವ ಜನರ
ಚಿಟಿಕಿ ಹಾಕಿ ತಂಬೂರಿ ಮೀಟಿ
ಎದೆಯ ಕದವ ತೆರೆಸಿ
ಕಾಳು ತುರಿಸಿ
ಕೆರೆಯ ನೀರನು ಕೆರೆಗೆ ಚೆಲ್ಲು ಎಂದ
ದಾಸರ ದಾಸ ಪುರಂದರ ದಾಸನೊಬ್ಬ
ವಿಜ್ಞಾನಿ !
    ಚರಕ ಸುಶ್ರುತರೇನು !
    ಬುದ್ಧ ಬಸವ ಮಧ್ವ ರಾಮಾನುಜರಾದರೂ ಏನು
    ಲಿಂಕನ್ ಗಾಂಧೀ ಕಾರ್ಲ್‌ಮಾರ್ಕ್ಸ್ ಆದರೂ ಏನು
    ಗೆಲಿಲಿಯೋ ಆರ್ಕಿಮಿಡಿಸ್ ಐನ್‌ಸ್ಟೈನ್
                ಆದರೂ ಏನು
    ಮೊದಲೆ ಇದ್ದ ಜಂಬೂದ್ವೀಪದ ಭಾರತವ
    ಕಂಡು ಹಿಡಿದವ ತಾನೇ ಮೊದಲು
    ಎಂದಿದ್ದ ಕೊಲಂಬಸ್ ಆದರೂ ಏನು
    ಇರುವುದನ್ನೇ ತಾವೇ ಮೊದಲು ಕಂಡೆವು ಎಂಬಂತೆ
    ತಮ್ಮ ತಮ್ಮ ಅನುಭವ ಸೇರಿಸಿ ಹೇಳುವಾತನೆ
        ವಿಜ್ಞಾನಿ !
ಹೀಗೆ ವ್ಯಷ್ಟಿ ಸಮಷ್ಟಿಯ ವಿಕಾಸವಾದದಲ್ಲಿ
'ಜ್ಞಾನಂ ವಿಜ್ಞಾನ ಸಹಿತಂ'
ಎಂಬ ನಿಕಷಕ್ಕೆ ಹಚ್ಚಿ ಒಕ್ಕಿದ್ದೆಲ್ಲ
ಅರಣಿ ಅರಣಿಗೆ ತಿಕ್ಕಿ ತೆಗೆದದ್ದೆಲ್ಲ
ವಿಜ್ಞಾನ
ಹಚ್ಚಿ ಒಕ್ಕಿದವರೆಲ್ಲ
ತಿಕ್ಕಿ ತೆಗೆದವರೆಲ್ಲ
ವಿಜ್ಞಾನಿಗಳು !

- ಪ್ರೊ. ವಸಂತ ಕುಷ್ಟಗಿ

# ಅಲಮೇಲಮ್ಮನ ಶಾಪ

✍ ಶೇಷಗಿರಿ ರಾವ್ ಮೂರ್ಚಿಂಗ್

ಸುಮಾರು ೧೯೪೦ನೇ ಇಸವಿಯಲ್ಲಿ ನಂಜನಗೂಡಿನ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ನಮ್ಮ ಚರಿತ್ರೆ ಪಾಠದಲ್ಲಿ ಒಂದು ಚಿಕ್ಕ ಕವನ ಇತ್ತು. ಅದಕ್ಕೆ ಅಲಮೇಲಮ್ಮನ ಶಾಪ ಎಂದು ಹೆಸರು:

''ಮಾಲಂಗಿ ಮಡುವಾಗಿ,
ತಲಕಾಡು ಮರಳಾಗಿ,
ಹುಟ್ಟು ಮೈಸೂರು ರಾಜರಿಗೆ
ಮಕ್ಕಳಾಗದಿರಲಿ''

ಇದರ ಅರ್ಥ ಏನೆಂದರೆ, ಒಬ್ಬ ಮೈಸೂರು ರಾಜರಿಗೆ ಪುತ್ರ ಸಂತಾನವಾದರೆ ಅವರ ಮುಂದಿನ ರಾಜರಿಗೆ ಗಂಡು ಮಗ ಹುಟ್ಟುವುದಿಲ್ಲ. ಅವರು ದತ್ತು ಮಾಡಿಕೊಳ್ಳಬೇಕು ಅಥವಾ ಅವರ ತಮ್ಮನ ಮಗನೋ, ದಾಯಾದಿಯೋ, ಇನ್ನಾರೋ ಉತ್ತರಾಧಿಕಾರಿಯಾಗಬೇಕು. ನಂತರ ಬಂದವರಿಗೆ, ಒಬ್ಬನಾದರೂ ಮಗ ವಾರಸುದಾರನಾಗುತ್ತಾನೆ. ಇದು ಖಚಿತ. ಆದರೆ, ಅವರಿಗೆ ಪುನರ್ಸಂತಾನವಿರುವುದಿಲ್ಲ. ಇತ್ಯಾದಿ. ಸೋಜಿಗವೇನೆಂದರೆ ಈ ೪೦೦ ವರ್ಷಗಳಿಂದ ಈ ಶಾಪವು ಸತ್ಯವಾಗಿಯೇ ನಡೆದು ಬಂದಿದೆ.

ಈ ಪದ್ಯದ ಹಿನ್ನೆಲೆಯನ್ನು ತಿಳಿಯಬೇಕಾದರೆ ಸುಮಾರು ೬೦೦ ವರ್ಷಗಳ ಹಿಂದಿನ ಇತಿಹಾಸವನ್ನು ಅಧ್ಯಯನ ಮಾಡಿ ನೆನೆಸಿಕೊಳ್ಳಬೇಕು. ಮೈಸೂರು ರಾಜಮನೆತನವು ಸ್ಥಾಪಿತವಾದದ್ದು ೧೩೯೯ನೇ ಇಸವಿಯಲ್ಲಿ. ಯದುರಾಯರು ಮತ್ತು ಕೃಷ್ಣರಾಯರು ಈ ವಂಶವನ್ನು ಆರಂಭಿಸಿದರು. ಆಗಿನ ಮೈಸೂರು ದೇಶವು ಪೂರ್ವ ದಿಕ್ಕಿನಲ್ಲಿ ಹೆಚ್ಚು ದೂರ ವ್ಯಾಪಿಸಿರಲಿಲ್ಲ. ಶ್ರೀರಂಗಪಟ್ಟಣವೂ ಸಹ ವಿಜಯ ನಗರದ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದು ಒಬ್ಬ ಕಿರುರಾಜರು (ಅಂದರೆ ವೈಸರಾಯ್ ಅವರು) ಅಲ್ಲಿ ಇದ್ದು ರಾಯಭಾರ ಮಾಡುತ್ತಿದ್ದರು. ತಾಳೀಕೋಟೆಯ ಯುದ್ಧದಲ್ಲಿನ ಸೋಲಿನಂತರ ಇವರು ಸ್ವತಂತ್ರರಾಗಿಬಿಟ್ಟಿದ್ದರು.

ಸುಮಾರಾಗಿ ೧೬೧೦ನೇ ಇಸವಿಯಲ್ಲಿ ಮೈಸೂರು ದೇಶದ ೯ನೆಯ ರಾಜರಾದ ರಾಜಾಒಡೆಯರ್ ಅವರು ಆಳುತ್ತಿದ್ದ ಸಮಯದಲ್ಲಿ ಶ್ರೀರಂಗರಾಯ ಎನ್ನುವವರು ಶ್ರೀರಂಗಪಟ್ಟಣದಲ್ಲಿ ಸಿಂಹಾಸನಾ ರೂಢರಾಗಿದ್ದರು. ಆದರೆ, ಅವರಿಗೆ ಗುಣವಾಗದಂತಹ ಒಂದು ರೋಗ (ಬೆನ್ನು ಫಣಿ ಇದ್ದಿರಬಹುದು ಎಂದು ಪ್ರತೀತಿ) ಬಂದ ಸಮಯದಲ್ಲಿ, ತಮ್ಮ ರಾಜ್ಯವನ್ನು ರಾಜಾ ಒಡೆಯರಿಗೆ ವಹಿಸಿಕೊಟ್ಟು, ತಾನು ಅವಕಾಶ ಸ್ವೀಕರಿಸಿ, ತನ್ನ ಇಬ್ಬರು ಹೆಂಡಿರೊಡನೆ ತಲಕಾಡಿನ ಹತ್ತಿರ ಇರುವ ಮಾಲಂಗಿಗೆ ಹೊರಟು ಹೋದರು. ನಂತರ ಸ್ವಲ್ಪ ದಿನಗಳಲ್ಲಿಯೇ ಅಲ್ಲಿ ಮೃತರಾಗಿಬಿಟ್ಟರು.

ಇದನ್ನು ಕೇಳಿದ ರಾಜಾ ಒಡೆಯರು ವ್ಯಸನಪಟ್ಟು, ಲೋಕರೀತಿಯನ್ನು ಅನುಸರಿಸಿ ಸಮಾಧಾನ ಮಾಡಿಕೊಂಡು ಪಟ್ಟಾಭಿಷೇಕವನ್ನು ಮಾಡಿಕೊಂಡರು. ಈನಂತರ ಶ್ರೀರಂಗಪಟ್ಟಣವು ಮೈಸೂರು ದೇಶಕ್ಕೆ ರಾಜಧಾನಿ ಆಯಿತು. ಅಂದಿನಿಂದ, ೧೯೪೭ರ ವರೆಗೂ ರಾಜಧಾನಿಯ ಸ್ಥಾನ ಮೈಸೂರಿಗೆ ಹಿಂತಿರುಗಲಿಲ್ಲ. ಇತ್ತ, ರಾಜಾ ಒಡೆಯರೋ ಶ್ರೀರಂಗಪಟ್ಟಣದಲ್ಲಿ ಸಿಂಹಾಸನಾರೂಢರಾಗಿ ಸುತ್ತಮುತ್ತಲ ಎಲ್ಲಾ ಪಾಳೆಗಾರರುಗಳನ್ನೂ ಸೋಲಿಸಿ, ಸಣ್ಣಪುಟ್ಟ ಒಡೆಯರುಗಳನ್ನು ಅಧೀನಮಾಡಿಕೊಂಡು ಮೈಸೂರು ರಾಜ್ಯಕ್ಕೆ ಒಂದು ವಿಶೇಷ ಸ್ಥಾನವನ್ನು ಕಲ್ಪಿಸಿಕೊಟ್ಟರು. ದಸರಾ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಆರಂಭಿಸಿದರು.

ಈ ನಂತರ ಮೊದಲನೆಯ ನವರಾತ್ರಿಯ ಮಹೋತ್ಸವದ ಆಚರಣೆಗಾಗಿ ರಂಗನಾಯಕಿ ಅಮ್ಮನವರಿಗೆ ಅಲಂಕಾರಕ್ಕಾಗಿ ಆಭರಣಗಳನ್ನು ಕಳುಹಿಸಿ ಕೊಡಲು ದೇವಸ್ಥಾನದ ಮಂಚಾತರು ರಾಜರಲ್ಲಿ ವಿನಿಮಯವನ್ನು ಮಾಡಿಕೊಂಡರು. ಪೂರ್ವದಿಂದಲೂ ರಂಗನಾಯಕಿ ಅಮ್ಮವರಿಗೆ ಅಲಂಕಾರವನ್ನು ಮಾಡುತ್ತಿದ್ದ ರತ್ನ ಪಡಿ ನಗಗಳನ್ನು ಶ್ರೀರಂಗರಾಯರ ಪ್ರಥಮ ಪತ್ನಿ ಅಲಮೇಲಮ್ಮನವರು ತನ್ನ ಸಂಗಡ ಮಾಲಂಗಿಗೆ ತೆಗೆದುಕೊಂಡು ಹೋಗಿದ್ದಾರೆಂದು ತಿಳಿದುಬಂದಿತು. ಆದರೆ ಈ ಸಮಯದಲ್ಲಿ, ಆಕೆಯು ಅವುಗಳನ್ನು ಹಿಂತಿರುಗಿಸಲು ನಿರಾಕರಿಸಿದರು. ನಂತರ, ರಾಜರು ಬಲಾತ್ಕಾರ ಮಾಡಬಹುದೆಂಬ ಭಯದಿಂದ ಒಂದು ಮೂಗುತಿಯನ್ನು ಮಾತ್ರ ಕೊಟ್ಟು, ಉಳಿದ ಒಡವೆಗಳನ್ನೆಲ್ಲಾ ಮಡಿಲಲ್ಲಿ ಕಟ್ಟಿಕೊಂಡು, ರಾಜರಿಗೆ (ಮೇಲೆ ಬರೆದಿರುವ) ಶಾಪದ ಕಠಿನೋಕ್ತಿಗಳನ್ನು ಹೇಳುತ್ತಾ ಮಾಲಂಗಿಯಲ್ಲಿರುವ ಕಾವೇರಿ ನದಿಯ ಮಡುವಿನಲ್ಲಿ ಧುಮುಕಿ ಆತ್ಮಹತ್ಯೆ ಮಾಡಿಕೊಂಡುಬಿಟ್ಟರು.

ಇದು ಒಂದು ಕಟ್ಟು ಕಥೆಯೇ ಆಗಲಿ, ನಿಜವೇ ಆಗಲಿ, ಆಶ್ಚರ್ಯಕರವಾದ ನಿಜಾಂಶವೇನೆಂದರೆ, ಅಂದಿನಿಂದ ಈ ದಿನದವರೆಗೂ ಈ ಶಾಪವು ಅನ್ವಯಿಸುತ್ತಲೇ ಇದೆ. ಈ ಶಾಪದ ಕವನವನ್ನು ನಮ್ಮ ತಾತನವರು ೧೯೩೦ರಲ್ಲಿ, ತನ್ನ ಬಾಲ್ಯದಲ್ಲಿ, ಓದಿದ ವಿಚಾರವನ್ನು ಹೇಳಿದ್ದರು. ಆನಂತರ, ಅನೇಕ ತಲೆಗಳಾಗಿವೆ. ಅಂದಮೇಲೆ, ಇದೇನೂ ಹಿಂದಾಲೋಚನೆಯ ಮೇಲೆ ಬರೆದ ಕಟ್ಟು ಕಥೆಯಲ್ಲ.

ರಾಜಾ ಒಡೆಯರ್ ೧೫೭೮ರಿಂದ ೧೬೧೭ರ ವರೆಗೂ ಆಳಿ ಮೃತರಾದರು. ಅವರ ಸ್ವಂತ ಪುತ್ರರು ಮೊದಲೇ ತೀರಿಹೋಗಿದ್ದರು. ಅವರ ನಂತರ ಅವರ ಮೊಮ್ಮಗ ೭ನೇ ಚಾಮರಾಜ ಒಡೆಯರ್ ಪಟ್ಟವನ್ನೇರಿದರು. ಅವರಿಗೆ ಪುತ್ರ ಸಂತಾನವಾಗಲಿಲ್ಲ. ಅವರ ಚಿಕ್ಕಪ್ಪನಾದ ಇಮ್ಮಡಿ ಕೃಷ್ಣರಾಜ ಒಡೆಯರ್ ಇವರ ಮರಣಾನಂತರ ಸಿಂಹಾಸನವನ್ನೇರಿದರು. ಅವರು ರಾಜಾಒಡೆಯರ ಮರಣಾನಂತರ ಹುಟ್ಟಿದ ಸ್ವಂತ ಮಗ. ಅವರಿಗೂ ಸಂತಾನವಾಗಲಿಲ್ಲ. ದಾಯಾದಿ ಗಳಾದ ರಣಧೀರ ಕಂಠೀರವ ನರಸಿಂಹರಾಜ ಒಡೆಯರ್ ೧೬೩೮ರಿಂದ ೧೬೫೯ರ ವರೆಗೂ ಆಳ್ವಿಕೆ ಮಾಡಿದರು. ಅವರು ೬ನೇ ರಾಜರಾದ ಬೆಟ್ಟದ ಚಾಮರಾಜ ಒಡೆಯರ ಸ್ವಂತ ಮಗ. ಅವರ ನಂತರ ಬಂದ ದೊಡ್ಡದೇವರಾಜ ಒಡೆಯರ್ ಒಬ್ಬ ಹಿಂದಿನ ಯುವರಾಜರ ಮಗ. ಅವರ ಸ್ವಂತ ಮಗ ಚಿಕ್ಕದೇವರಾಜ ಒಡೆಯರ್ ೩೧ ವರ್ಷ ಕಾಲ ರಾಜ್ಯಭಾರ ಮಾಡಿದ ತುಂಬಾ ಹೆಸರುವಾಸಿಯಾಗಿದ್ದರು. ನಂತರ ಬಂದ ಕಂಠೀರವ ಮಹಾರಾಜರಿಗೆ ಪುತ್ರ ಸಂತಾನ ಆಯಿತು. ೧೬ನೇ ರಾಜರಾದ ಅವರ ಮಗ ದೊಡ್ಡ ಕೃಷ್ಣರಾಜರ ನಂತರ, ಅವರ ಸ್ವೀಕೃತ ಪುತ್ರರು ಮತ್ತು ಅವರ ನಂತರ ಸ್ವಂತ ಪುತ್ರರಾದ ನಂಜರಾಜ ಒಡೆಯರ್ ರಾಜ್ಯಭಾರ ಮಾಡಿದರು. ಅವರಿಗೆ ಸಂತಾನವಿಲ್ಲ. ಅವರ ತಮ್ಮನಾದ ಬೆಟ್ಟದ (ಆನೆಯ) ಚಾಮರಾಜ ಒಡೆಯರ್ ಅವಿವಾಹಿತರಾಗಿಯೇ ಮೃತರಾದರು. ಈ ಮಧ್ಯೆ ಹೈದರ್ ಅಲಿ ಪೂರ್ಣಾಧಿಕಾರವನ್ನು ಕೈವಶಮಾಡಿಕೊಂಡುಬಿಟ್ಟಿದ್ದರು. ಈ ಬಳಿಕ ರಾಜಮಾತೆ ಲಕ್ಷ್ಮೀ ಅಮ್ಮಣ್ಣಿ ಅವರು ದತ್ತು ಆಗಿ ಖಾಸಾ (೯ನೆಯ) ಚಾಮರಾಜರನ್ನು ಸ್ವೀಕೃತ ಪುತ್ರನಾಗಿ ದತ್ತು ಮಾಡಿಕೊಂಡರು. ಅವರಿಗೆ ಪುತ್ರೋತ್ಸವ ಆಯಿತು.

ಅವರ ಮಗ, ಮುಮ್ಮಡಿ (ಅಂದರೆ ಮೂರನೆಯ) ಕೃಷ್ಣರಾಜ ಒಡೆಯರ್. ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನರ ಸೋಲು ಮತ್ತು ಮರಣದ ಬಳಿಕ ಇಂಗ್ಲಿಷ್ ಸರ್ಕಾರ ಇವರನ್ನು ಮತ್ತೆ ಸಿಂಹಾಸನದ ಮೇಲೆ ಕೂಡಿಸಿತು. ರಾಜಧಾನಿಯನ್ನು ಮೈಸೂರಿಗೆ ವರ್ಗಾಯಿಸಲಾಯಿತು.

ಈ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ೭೪ ವರ್ಷಗಳು ಬದುಕಿದ್ದು ಯದುವಂಶದಲ್ಲಿಯೇ ಅತ್ಯಂತ ದೀರ್ಘಾಯುಷ್ಯಂತರೆಂದು ಹೆಸರುವಾಸಿ ಯಾಗಿದ್ದಾರೆ. ಆದರೆ, ಅವರಿಗೆ ನಾಲ್ಕರು ಹೆಂಡತಿಯರಿಂದಲೂ ಗಂಡು ಮಕ್ಕಳಾಗಲಿಲ್ಲ. ಅವರನ್ನು ಅನುಸರಿಸಿ ಮುಂದಿನ ಮಹಾರಾಜರಾದವರು ಅವರ ದತ್ತು ಪುತ್ರನ, ಹತ್ತನೇ ಚಾಮರಾಜ ಒಡೆಯರ್ ಅವರು. ಅವರು ರಾಜ್ಯಭಾರ ಮಾಡಿ, ಕೇವಲ ೩೧ನೇ ವಯಸ್ಸಿನಲ್ಲಿ ೫ ಮಕ್ಕಳನ್ನು ಬಿಟ್ಟು ಕೈಲಾಸ ವಾಸಿಯಾದರು.

ಅವರ ಇಬ್ಬರು ಗಂಡು ಮಕ್ಕಳಲ್ಲಿ ದೊಡ್ಡವರು ನಾಲ್ವಡಿ ಕೃಷ್ಣರಾಜ ಒಡೆಯರ್. ಅವರ ಹೆಸರನ್ನು ನಾವು ಅನೇಕ ಸನ್ನಿವೇಶಗಳಲ್ಲಿ ಕಾಣುತ್ತೇವೆ. ಅವರಿಗೆ ಮಕ್ಕಳಾಗಲಿಲ್ಲ. ಅವರ ತಮ್ಮನವರಾದ, ಯುವರಾಜರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರ ಮಗ ಜಯಚಾಮರಾಜ ಒಡೆಯರು ಅವರ ನಂತರ ಸಿಂಹಾಸನವನ್ನೇರಿದರು. ಭಾರತ ಸ್ವತಂತ್ರವಾದ ಮೇಲೆ ಅವರು ರಾಜಪ್ರಮುಖರಾದರು. ನಂತರ, ಗವರ್ನರ್ ಸಹ ಆಗಿದ್ದರು. ಅವರಿಗೆ ಕೆಲವು ಹೆಣ್ಣು ಮಕ್ಕಳಲ್ಲದೆ, ೧೯೫೩ರಲ್ಲಿ ಒಬ್ಬ ಗಂಡು ಮಗ ಹುಟ್ಟಿದರು. ೧೯೭೦ರಿಂದ ಮಹಾರಾಜರೆಂಬ ಬಿರುದೂ ಕೂಡ ಹೊರಟು ಹೋಯಿತು.

ಜಯಚಾಮರಾಜ ಒಡೆಯರ್ ಅವರು ೧೯೭೪ರಲ್ಲಿ ಶಿವೈಕ್ಯರಾದರು. ಈಗ ಅವರ ಮಗ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ೨೬ನೆಯ ತಲೆಯಾಗಿ ವಂಶಕ್ಕೆ ಏಕೈಕ ವಾರಸುದಾರರಾಗಿದ್ದಾರೆ. ಲೋಕಸಭೆಯ ಸದಸ್ಯರೂ ಸಹ ಆಗಿದ್ದರು. ಮತ್ತೊಮ್ಮೆ ಚುನಾವಣೆಗೆ ನಿಲ್ಲಲಿದ್ದಾರೆ. ಅವರಿಗೆ ಸುಮಾರು ೫೦ ವರುಷ ವಯಸ್ಸು, ಇನ್ನೂ ಮಕ್ಕಳಿಲ್ಲ.

ನಂಬಿದರೆ ನಂಬಿ. ಬಿಟ್ಟರೆ ಬಿಡಿ. ಅಲಮೇಲಮ್ಮನ ಶಾಪ ಈವತ್ತಿನವರಿಗೂ ಪೂರ್ಣ ಪ್ರಮಾಣಿಕವಾಗಿದೆ.

+

## OBITUARY

We are deeply grieved to inform our members about the sad demise of Smt. Indira Iyengar at Bombay recently.

She was one of the oldest and active member of the Association. She had many friend in the Association and outside who will miss her.

We pray that her family members are endowed with the strength to bear this loss.

***

We are deeply grieved to inform our members about the sad and sudden demise of Shri T.R.S. Anandam at Bombay recently. Anandam was in his 80's.

T.R.S. Anandam was a Ex-secretary of the Association. He had many friend in the Association and outside who will miss him.

We pray that his family members are endowed with the strength to bear this loss.

## ವೇದ ಕಾಲೀನ ಸ್ತ್ರೀಯರ ಪರಂಪರೆ

(ಪುಟ 7ರಿಂದ)

ಹೆಣ್ಣುಗಳು, ಬ್ರಹ್ಮಚರ್ಯ ಪಾಲಿಸಿ ಬ್ರಹ್ಮವಾದಿನಿಯರಾಗಿರುತ್ತಿದ್ದುದುಂಟು. ಇಂದ್ರಿಯ ಸಂಯಮವನ್ನು ಯುಕ್ತ ವಯಸ್ಸು ಋತುಕಾಲ ಬರುವವರೆಗೆ ನಿಯಂತ್ರಿಸಿ ಬಾಳುತ್ತಿದ್ದುದು ಸಾಮಾನ್ಯ ಮತ್ತು ಕಡ್ಡಾಯ. 'ಶತಪಥ ಬ್ರಾಹ್ಮಣ'ದಲ್ಲಿ ಸ್ತ್ರೀಯರಿಗೆ ವೇದಾಧ್ಯಯನ' ಮತ್ತು ಯಜ್ಞಾಧಿಕಾರವಿದೆಯೆಂದೆ ಹೇಳಿದೆ. ಸ್ತ್ರೀ ಶಿಕ್ಷಣಕ್ಕೆ ಉತ್ತೇಜನವಿತ್ತುದಲ್ಲದೆ ಸ್ತ್ರೀಯೊಬ್ಬಳಿಗೆ ಆಕೆಯ ಪತಿಯೇ ಪರಮಗುರು ಎಂದಿವೆ. ಸ್ತ್ರೀ ಸ್ವಾತಂತ್ರ್ಯದ ಬಗೆಗೆ ಮತ್ತೆ ಬಂದ ಧರ್ಮಶಾಸ್ತ್ರೀ ಮನುವಿನಂತಹವರು ನಿರ್ಬಂಧಾತ್ಮಕ ಅಭಿಪ್ರಾಯ ಕೊಟ್ಟರೂ ವೇದಕಾಲದಲ್ಲಿ ಸ್ತ್ರೀಯರಿಗೆ ಹೆಚ್ಚು ಸ್ವಾತಂತ್ರ್ಯವಿತ್ತು. ಸ್ತ್ರೀಯರನ್ನು ಗೌರವದಿಂದ ನೋಡಲು ವೇದಗಳೇ ಕಾರಣ. (ಆದರೂ ಋಗ್ವೇದದ ಅಕ್ಷಸೂತ್ರವೊಂದರಲ್ಲಿ ಮಾತ್ರ ಜೂಜುಗಾರನ ಹೆಂಡತಿಯನ್ನು ಒಂದು ಚರ ಸೊತ್ತಿನಂತೆ ಭಾವಿಸಿರುವುದು ಇದಕ್ಕೊಂದು ಅಪವಾದವೆನ್ನಬಹುದು).

ಸ್ವಯಂವರ ವಿಧಿಯ ವಿವಾಹದ ಬಗೆಗೆ ವೇದಗಳಲ್ಲಿ ಪ್ರಸ್ತಾಪವಿದೆ. (ಅಥರ್ವ 2-30) ಸತೀಸಹಗಮನದ ಅಮಾನುಷೀಯ ಪದ್ಧತಿಗೆ ವೇದಗಳು ಬೆಂಬಲಕೊಟ್ಟಿಲ್ಲ. ಬಾಲ್ಯವಿವಾಹವನ್ನು ಖಂಡಿಸಲಾಗಿದೆ. (3-8-4). ಋಗ್ವೇದ ಸಮಾಜದ ಬಹು ಪತ್ನಿತ್ವವಾ ಪ್ರಪಂಚವಾಗಿತ್ತಾದರೂ ಏಕಪತ್ನಿ ವ್ರತಸ್ಥನಿಗೆ ಗೌರವಕೊಟ್ಟಿದೆ. ವಿಧವಾ ವಿವಾಹಕ್ಕೆ ಸಮ್ಮತಿ ಮತ್ತು (10-10-1 0-18-8 ಇತ್ಯಾದಿ) ಪತಿಮೃತ್ಯುವಿನ ನಂತರ ಯುವತಿ ವಿಧವೆಯಾದರೆ ಆಕೆ ತನ್ನ ಮೈದುನನನ್ನು ವರಿಸಿದ ಉಲ್ಲೇಖವಿದೆ. ಸವತಿಯನ್ನು ದೂರಮಾಡೆನ್ನುವ ಪ್ರಾರ್ಥನೆ ಇದೆ (10-145).

ವಿವಾಹವು ವೇದಕಾಲದಲ್ಲಿ ಸಾಮಾಜಿಕ ಒಪ್ಪಿಗೆಯುಳ್ಳದ್ದು, ಕನ್ಯಾದಾನ ಪದ್ಧತಿಯಿತ್ತು. ಆ ಪವಿತ್ರ ಬಂಧವು ಸ್ತ್ರೀತ್ವದ ಸಫಲತೆ ಹಾಗೂ ಪುರುಷನ ಯಶಸ್ಸಿಗೆ ಪೂರಕವೆಂದು ಪ್ರತಿಪಾದಿಸಲಾಗಿದೆ. ಆದರೆ ಹೆಣ್ಣಿಗಾಗಿ ಸ್ವಯಂಬಂಧಿಸಿದರೂ ಅದೇ ಹೆಣ್ಣು ಅನೈತಿಕ ಭ್ರಷ್ಟತೆಯನ್ನು ಸ್ವೈರವನ್ನೂ ವಿಕೃತ ಲೈಂಗಿಕ ಕಾಮನೆಯನ್ನು ತೋರಿದರೆ ಅಥರ್ವವೇದವು ಅದನ್ನು ಖಂಡಿಸಿದ್ದನ್ನು ನೋಡಬಹುದು. ಆದರೂ ಪುರುಷ ವಶೀಕರಣವನ್ನು ಯಾವ ಮಹಿಳೆಯೂ ಮಾಡಲು ಸಮ್ಮತಿಯಿತ್ತು ! ಮಹಿಳೆಯರಿಗೆ ವೇದಪಠಣದ ಹಕ್ಕಿಲ್ಲ. ಆ ಕಾರ್ಯ ಮಾಡಿ ಆಕೆ ನರಕಕ್ಕೆ ಹೋಗುವುದು ಬೇಡವೆಂದು ಪುರಿಯ ಶಂಕರಾಚಾರ್ಯರು 1994ರಲ್ಲಿ ಕೊಟ್ಟ ಆಜ್ಞೆಗೆ ವೇದದಲ್ಲಿ ಆಧಾರವಿಲ್ಲ. ಪ್ರಕೃತಿಯನ್ನು ಆರಾಧಿಸುವ ವೇದಗಳು ಮಹಿಳೆಯನ್ನು ಪ್ರಕೃತಿಸಂಕೇತವೆಂದು ಉಚ್ಚಸ್ಥಾನಕೊಟ್ಟಿದೆ. ಇಂತಹ ಅಪಶ್ರುತಿಯು ಮನಸ್ಮೃತಿಯ ಕಾರಣದಿಂದ ಉಂಟಾಗಿದೆ. ವೇದದಲ್ಲಿ ಲಿಂಗಭೇದದ ಸೊಲ್ಲು ಎಲ್ಲೂ ಇಲ್ಲ. ಮಹಿಳೆಗೆ ನಿಬಂಧವಿಲ್ಲ ಯಜ್ಞಯಾಗಾದಿಗಳಲ್ಲಿ ಅಧ್ಯಯನ ಮಾಡುವವನು 'ಅಧಿನೇ, ಸಮಧಿನೇ, ವಿದ್ವಾನ್' ಆಗಿರಬೇಕು ಎಂದಾಗ ಅವನು ಎನ್ನುವುದು ಸ್ತ್ರೀ ಪುರುಷರೆಡಕ್ಕೂ ಅನ್ವಯವಾಗವುದಾಗಿ ಹೆಣ್ಣುಗಂಡುಗಳೆಂದು ಪ್ರತ್ಯೇಕ ನಿರ್ದೇಶನ ಮಾಡಿಲ್ಲ. ನಮ್ಮಲ್ಲಿಂದೂ ಎಷ್ಟೋ ಮಂದಿ ಮಡಿಯಲ್ಲಿ ಪುರುಷಸೂಕ್ತ ಹೇಳುತ, ಮೂರ್ತಿ, ಲಿಂಗ ಸಾಲಿಗ್ರಾಮಗಳಿಗೆ ಅರ್ಚನೆಯ ಮಾಡುತ್ತಾರೆ. ಈ ಕಾರಣ ಅತ್‌ರಾಷೇಯ ಮೂಲ ವೇದಶ್ರುತಿಯನ್ನು ಬಿಟ್ಟು ನಿರಂತರ ಬದಲಾಗುವ, ಮಾನವ ನಿರ್ಮಿತ ಸ್ಮೃತಿಯನ್ನು ಇಂದಿನ ಸಮಾಜಕ್ಕೆ ಹೇರುವುದು ಸರಿಯಲ್ಲ. ನಮ್ಮಲ್ಲಿ ರಾಮಕೃಷ್ಣ ಪರಮಹಂಸ ಮಾತ್ರ ವಿವೇಕಾನಂದರು ಸ್ತ್ರೀ ಸಮಾನತೆಯ ಹಾಗೂ ಅಸ್ಪೃಶ್ಯತೆದಿಂದ ನಾರಾಯಣರ ಮಾತೆತ್ತಿದ್ದಾರೆ. ರಾಮಕೃಷ್ಣ ಆಶ್ರಮಗಳು ಮಹಿಳೆಯರಿಗೆ ವೇದಶಿಕ್ಷಣ ಕೊಡುತ್ತಿವೆ. ಉಪನಯನ ಪಡೆದವರೇ ಅದನ್ನು ಮಾಡಬೇಕಿಲ್ಲ.

ವೇದವೆಂದರೆ ಜ್ಞಾನ. ಯಾವುದೇ ವ್ಯಕ್ತಿಗೆ ಜ್ಞಾನದ ಬಾಗಿಲು ಮುಚ್ಚುವುದು ತಪ್ಪು. ಮಹಿಳೆಯರಿಗೂ ಅದನ್ನು ಮುಚ್ಚಬಾರದು. ದೈವ ಸೃಷ್ಟಿ ಎಲ್ಲ ಜೀವಿಗಳಿಗೂ ನೀಡಿರುವ ಸ್ವಾತಂತ್ರ್ಯವನ್ನು ಅಲ್ಲಗಳೆದರೆ ದೈವ ಸೃಷ್ಟಿಗೇ ಅಪಚಾರ ಮಾಡಿದಂತೆ. ಆದುದರಿಂದ ನೀತಿ ನಿರೂಪಣೆಯನ್ನು ಮತ್ತೊಮ್ಮೆ ಮಾಡಬೇಕಾದ ಪ್ರಸಂಗ ಬಂದಿದೆ.

+

**TRIMURTI**
**JEWELLERS**
GOLD AND DIAMOND ORNAMENTS
460/4, Venkatesh Niwas,
Ground Floor, Bhaudaji Road,
Opp Mysore Association,
Matunga (C.Rly.) Mumbai-400 019.
Phone : **2402 3485**

# ಭಾರತೀಯ ಕಲೆ

ಭಾಗ - 22

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

ಅವರ ನಂತರ ಬಂದ ಹಲವು ಶಿಲ್ಪಕಾರರು ಇವರೊಂದಿಗೆ ಹಲವು ಅಂತಹದೇ ಮನೋಭಾವಗಳು ಅಥವಾ ಭಾವನೆಗಳನ್ನು ಹಂಚಿಕೊಂಡಿದ್ದಾರೆ. ಅವರ ಪೈಕಿ ಸರ್ಬರಿ ರಾಯ್‌ಚೌದರಿ ಮತ್ತು ಪಿಲ್ಲೂ ಪೂಚನ್‌ವಾಲಾ ಅವರು ಪ್ರಮುಖ ಶಿಲ್ಪಿಗಳು. ಆದರೆ ಅವರ ಕಾರ್ಯ ವಿಧಾನ ಹಾಗೂ ರೂಪ, ಶೈಲಿಯಲ್ಲಿ ಸಹ ಹೆಚ್ಚು ಅಂತರವಿದೆ. ಆದಾಗ್ಯೂ ಅವರು ಮೌಲ್ಯ ಮತ್ತು ನಿರ್ಮಾಣದಲ್ಲಿ ಹೊಸತು ಮತ್ತು ಹಳೆಯದನ್ನು ಸಂಯೋಜಿಸಿದ್ದಾರೆ. ಇದರಲ್ಲಿ ಸರ್ಬರಿ ರಾಯ್ ಚೌದರಿ ಅವರು ತಂತ್ರ ಮತ್ತು ಸಾಂಪ್ರದಾಯಿಕ ಪರಿಕಲ್ಪನೆಗಳಿಗೆ ಹತ್ತಿರವಾದರು. ಆದರೆ ಪಿಲ್ಲೂ ಪೂಚನ್‌ವಾಲಾ ಅವರು ಔದ್ಯೋಗಿಕ ಮತ್ತು ತಾಂತ್ರಿಕ ಸಾಧನಗಳ ಸಾಧ್ಯತೆಗಳನ್ನು ಪರಿಶೀಲಿಸಿ ಹೊಸ ಆಲೋಚನೆಗಳಿಂದ ಚಿಂತಿಸಿದ್ದಾರೆ.

ಸರ್ಬರಿ ರಾಯ್ ಅವರು ಇಂದು ನಮ್ಮ ದೇಶದ ಹೆಚ್ಚು ಪ್ರಜ್ಞಾವಂತ ಶಿಲ್ಪಕಾರರಲ್ಲಿ ಒಬ್ಬರು ಹಾಗೂ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿರುವವರು. ಇವರ ಶಿಲ್ಪಗಳು ಜೈವಿಕ ರೂಪವನ್ನು ಹೊಂದಿದ್ದು, ಜೀವನ ಮತ್ತು ಪ್ರಕೃತಿಯ ಲಯಕ್ಕೆ ಸ್ಪಂದಿಸುವ ಗುಣ ಹೊಂದಿವೆ. ಇದರಿಂದ ಪ್ರತಿಭಾವಂತಿಕೆಯು ವೃದ್ಧಿಸಿದೆ. ಹಾಗೂ ಅವು ಪೂರ್ಣತೆಯನ್ನು ಸ್ಮಾರಕತೆಯನ್ನು ಹೊಂದಿವೆ. ಈ ಭಾವನಾತ್ಮಕ ಮನೋಧರ್ಮ ಮತ್ತು ಆತನ ಸೂಕ್ಷ್ಮ ಮನೋ ಹೊಂದಿಕೆಯಂತೆ ಸರ್ಬರಿ ಅವರು ಎರಕ ಮತ್ತು ಮಾದರಿಯ ಸಾಂಪ್ರದಾಯಿಕ ಸಾಧನದಲ್ಲಿ ಕೆಲಸ ಮಾಡಿದ್ದಾರೆ. ಶಿಲ್ಪಿಗೆ ಜೇಡಿಮಣ್ಣು ಮತ್ತು ಪ್ರತಿಕೃತಿಯ ಕಾರ್ಯ ವಿಧಾನ ಉಜ್ವಲವೆಂದು ಅವರು ನಂಬಿದ್ದಾರೆ. ಇದರಿಂದ ಅವರ ಶಿಲ್ಪಗಳು ಮಾನಸಿಕ ಮತ್ತು ಸ್ಪರ್ಶೇಂದ್ರಿಯ ಅನುಭವದೊಂದಿಗೆ ಒಂದಾಗಿ ಶ್ರೇಷ್ಠವೆನಿಸಿದೆ. ತನ್ನ ಮಣ್ಣಿನ ಮಾದರಿಗಳನ್ನು ಕೊನೆಗೆ ತಾಮ್ರದಲ್ಲಿ ಆತ ಎರಕದಂತೆ ಕರಗಿದ ಲೋಹದ ಘನವಲ್ಲದ ಮತ್ತು ಮೆತುವಾಗಿಸಲು ಮಣ್ಣನ್ನು ಕುಶಲತೆಯಿಂದ ನಿರ್ವಹಿಸಿದ್ದಾರೆ. ತಮ್ಮ ತಾಮ್ರ ಶಿಲ್ಪ ಎರಕ ಭಾಗವು ಮಣ್ಣಿನ ಜೈವಿಕ ಪ್ರಕೃತಿ, ಮೃದುತ್ವ ಮತ್ತು ಶ್ರೇಷ್ಠತೆಯಿಂದ ಕೂಡಿದೆ. ಸಾಂಪ್ರದಾಯಿಕ ಆಚರಣಾ ಶಿಲ್ಪದ ಫಲ ನೀಡುವ ದೇವತೆಗಳು ಮತ್ತು ಮಾತೃದೇವತೆಯ ಇಂದ್ರಿಯ ಸಂಬಂಧವಾದ ಶಿಲ್ಪಗಳು ಸಾಮಾನ್ಯವಾಗಿ ಚಿಕ್ಕವು. ಪ್ರಕೃತಿಯ ಮಾನವ ಚಿತ್ರಗಳು ಅಥವಾ ಜೈವಿಕ ರೂಪಗಳಿಂದ ಕೂಡಿವೆ.

ಇತ್ತೀಚೆಗೆ ಸರ್ಬರಿಯವರು ಸ್ತ್ರೀ ಶಕ್ತಿಯನ್ನು ಪ್ರತಿನಿಧಿಸುವ ಶಿಲ್ಪಗಳನ್ನು ರಚಿಸಿದ್ದಾರೆ. ಆದರೆ ಅವರ ಇತ್ತೀಚಿನ ಕೃತಿಗಳು ಮಹತ್ವಪೂರ್ಣ ಆಂತರಿಕ ಮೌಲ್ಯಗಳು ಮತ್ತು ತೋರಿಕೆಯ ಐಂದ್ರಿಯ ಸಂಬಂಧದಿಂದ ದೂರವಿರುವಂತಹವು. ಹಲವು ಸಂಗೀತಗಾರರ, ನವಿರಾದ ಮಾದರಿಗಳನ್ನು ಮಾಡಿದ ಅವರ ಶಿಲ್ಪಗಳು ಏನೇ ಆದರೂ ಅಸಾಧಾರಣವಾಗಿ ಅಭಿನಯಾತ್ಮಕವಾದುವು. ೧೯೬೦ರ ನಂತರ ಅವರ ಶಿಲ್ಪಗಳು ಹೆಚ್ಚು ಔಪಚಾರಿಕವಾಗತೊಡಗಿತು. ಅವರ ಮುಖ್ಯ ಆಸಕ್ತಿ ಆಕಾರದಲ್ಲಿ ಗುಂಪಾಗಿ ತಿರುಚಿಕೊಂಡಿರುವ ಆಕಾರಗಳು ಮತ್ತು ಚಲನೆಗಳನ್ನು ಹೆಚ್ಚು ಹೆಚ್ಚಾಗಿ ಕ್ರಿಯಾತ್ಮಕಗೊಳಿಸುವುದು. ಆದರೆ ಇತರ ಕೆಲವು ಶಿಲ್ಪಕಾರರಂತೆ ಔದ್ಯಮಿಕ ಸಂಸ್ಕೃತಿಯ ವೈಜ್ಞಾನಿಕ ಮನೋಭಾವಗಳಿಂದ ತಮ್ಮ ಕೃತಿಯನ್ನು ಅಂತರದಲ್ಲಿಡಲು ಆಂತರಿಕ ಮನೋವೃತ್ತಿಯನ್ನು ಹೊಂದಿದ್ದಾರೆ.

ಸ್ವಾತಂತ್ರ್ಯಾನಂತರ ಆಧುನಿಕ ಭಾರತೀಯ ಸಮಾಜವು ತಡವಾಗಿ ವಿಶೇಷ ಗುಣವನ್ನು ಹೊಂದಿದರೂ ಔದ್ಯಮೀಕರಣದ ಬೆಳವಣಿಗೆಯಿಂದ ಸ್ಥಿರಗೊಂಡಿದೆ. ಔದ್ಯೋಗಿಕ ಸಮಾಜದಲ್ಲಿ ಯಂತ್ರಗಳು ಮತ್ತು ಸಾಧನಗಳು ಪ್ರಮುಖ ಪಾತ್ರವನ್ನು ವಹಿಸಿವೆ. ಇವು ವ್ಯಕ್ತಿಯ ವ್ಯಕ್ತಿತ್ವವನ್ನು ಪರಿಣಾಮಗೊಳಿಸಿವೆ. ವೈಜ್ಞಾನಿಕ ಕಾರ್ಯವಿಧಾನ ಮತ್ತು ಔದ್ಯೋಗಿಕ ಶಿಸ್ತು ತಡವಾಗಿ ಬೆಳವಣಿಗೆ ಹೊಂದಿತು ಹಾಗೂ ಭಾವನಾತ್ಮಕ ಜೀವನವು ಶೀಘ್ರವಾಯಿತು. ಚಲನಾತ್ಮಕ ಕ್ಷೇತ್ರದಲ್ಲಿ ಔದ್ಯೋಗಿಕ ಮಾಧ್ಯಮದ ಪರಿಪಾಲನೆಯು ಶಿಲ್ಪಕಾರ ಅಥವಾ ಕಲಾವಿದನ ಕೆಲಸ ಮತ್ತು ಯೋಚನಾ ವಿಧಾನವನ್ನು ವಿವೇಚನೆ ಮಾಡುವಂತಾಯಿತು.

ಶಾಂಖೊ ಚೌಧರಿ ಭಾರತದಲ್ಲಿ ಔದ್ಯೋಗಿಕ ಮತ್ತು ತಾಂತ್ರಿಕ ಮಾಧ್ಯಮಗಳನ್ನು ಕಂಡು ಹಿಡಿದ ಮೊದಲ ಶಿಲ್ಪಿ. ಅವರು ಶಿಕ್ಷಕರಾಗಿದ್ದ ಬರೋಡಾ ಕಲಾ ಶಾಲೆಯಲ್ಲಿ ಆ ಮಾಧ್ಯಮವನ್ನು ಉಪಯೋಗಿಸುವಿಕೆಯನ್ನು ಪರಿಚಯಿಸಿದರು. ಸಾಣೆ ಹಿಡಿಯುವಿಕೆ, ನೇರ ಬೆಸೆಯುವಿಕೆ, ಮರಳು ವಿಧಾನದಲ್ಲಿ ಕೈಗಾರಿಕಾ ಎರಕದಿಂದ ಅಥವಾ ಕಲ್ಲು ಫಲಕಗಳು ಮರದ ಹಲಗೆ ಮುಂತಾದುವುಗಳಲ್ಲಿ ಅವರ ರಚನೆ ಅಭಿವ್ಯಕ್ತಿಯ ಹೊಸ ಕ್ಷೇತ್ರಗಳಿಗೆ ದಾರಿಯಾಯಿತು. ಮಹೇಂದ್ರ ಪಾಂಡ್ಯ, ರಾಘವ ಕನೇರಿಯಾ, ನಾರಾಯಣ ಕುಲಕರ್ಣಿ, ರಮೇಶ್ ಪಟೇರಿಯಾ ಮುಂತಾದ ಹಲವು ಶಿಲ್ಪಿಗಳಿಗೆ ಸ್ಫೂರ್ತಿಯಾಯಿತು. ಶಾಂಖೊ ಚೌಧರಿ ಅವರು ಪ್ರಕೃತಿಯಿಂದ ರಮ್ಯ ಮತ್ತು ಭಾವನಾತ್ಮಕಗೊಂಡರು. ಇದರಿಂದ ಅವರು ಔದ್ಯಮಿಕ ಮಾಧ್ಯಮವನ್ನು ಉಪಯೋಗಿಸಿದ್ದಾರೆ. ಅವರ ಕೃತಿ ಲಯಬದ್ಧರೂಪವನ್ನು ಹಾಗೂ ಕಾವ್ಯಾತ್ಮಕ ಅಥವಾ ಭಾವಗೀತಾತ್ಮಕ, ಲಯಬದ್ಧ ರೂಪವನ್ನು ಪ್ರತಿನಿಧಿಸಿವೆ. ಅವರ ನೇರರಚನೆ, ಮೇಣ ಫಲಕ, ಲೋಹದ ಹಲಗೆ, ಕಲ್ಲಿನ ಫಲಕ, ಮರದ ಹಲಗೆಗಳೊಂದಿಗಿದ್ದು, ಭಾರತೀಯ ಶಿಲ್ಪಕ್ಕೆ ಹೊಸ ಅರ್ಥವನ್ನು ಕೊಟ್ಟಿದ್ದಾರೆ. ಅವರ ಮಾರ್ಪಡಿಸಲಾಗುವ ನಿಷೇಧಾತ್ಮಕ ಮತ್ತು ನಿಶ್ಚಯಾತ್ಮಕ ಯೋಜನೆಗಳ ಅಥವಾ ಕ್ಷೇತ್ರದ ವ್ಯವಸ್ಥೆಯು ಅರ್ಕಿಪೆನ್ಕೋ (Archipenko)ನ ಕೃತಿಯೊಂದಿಗಿನ ಸಂಬಂಧವು ಸೂಚಿಸುತ್ತದೆ.

ಆದರೆ ಶಾಂಖೆ ಚೌಧರಿಯವರ ಆಸಕ್ತಿಯು ಸಮತಲದ ನಿರರ್ಗಳವಾದ ವ್ಯವಸ್ಥೆ ಮತ್ತು ಭಾವನಾತ್ಮಕ ಲಯ ಬದ್ಧತೆಯೊಂದಿಗಿದೆ. ಅರ್ಕಿಪೆನ್ಕೋವಿನ ವಿಶ್ಲೇಷಣಾತ್ಮಕ ಮತ್ತು ಘನಾಕೃತಿಯಂತಿರುವ ಅವರ ಆಸಕ್ತಿಯು ಟೆರ್ರಾಜೊ (Terrazo) ತಂತ್ರದ ಉಪಯೋಗಕ್ಕಾಗಿಯೇ. ಕಡೆಗೆ ಈ ವಿಸ್ತೃತಗೊಂಡ ತನ್ನ ನಿರ್ವಹಣೆಯ ಸ್ವಾತಂತ್ರ್ಯವು ವಕ್ರಾಕೃತಿ ಮತ್ತು ಲಯ ರೂಪವನ್ನು ನೋಡಬಹುದು.

ರಾಘವ ಕನೇರಿಯಾ ಅವರು ಕೆತ್ತನೆಯ ನೇರ ಕಾರ್ಯ ವಿಧಾನಗಳ ಬಳಸುವಿಕೆ, ಔದ್ಯಮಿಕ ಚಿತ್ರವಾಗಲಿ, ಮರ ಅಥವಾ ಕಬ್ಬಿಣದಲ್ಲಿ ಜೋಡಣೆ ಮತ್ತು ನಿರ್ಮಾಣಕ್ಕಾಗಿ ಮಾದರಿ ಮತ್ತು ಎರಕದಿಂದ ೧೯೬೦ರ ಆರಂಭದಿಂದ ಬದಲಾಯಿಸಿದ್ದಾರೆ. ಹಾಗೂ ಉಳಿಗೆಲಸ, ಕೊರೆಯುವಿಕೆಯಿಂದ ರೂಪವನ್ನು ಬದಿಸಿದ್ದಾರೆ. ಇದರಿಂದ ಒಳ್ಳೆಯ ಪ್ರತಿಫಲ ಹಾಗೂ ಔದ್ಯೋಗಿಕ ಸಂಸ್ಕೃತಿಯ ಪ್ರಾಥಮಿಕ ಲಕ್ಷಣವನ್ನು ಹೊಂದಿದೆ. ಏನೇ ಆದರೂ ಗಿಡಗಳು ಅಥವಾ ಪ್ರಾಣಿಗಳಂತೆ ಇದು ಭಾವನಾತ್ಮಕವಾದುದು ಹಾಗೂ ಕಲ್ಪನೆಗಳು ಜೈವಿಕವಾದುದು. 'ಕಾಕ್ರಸ್' 'ಹುಂಜ'- ಅವರ ಮೊದಲ ರಚನೆಗಳು. 'ಹುಂಜ' ಮತ್ತು 'ಎತ್ತು' ಕೃತಿಗಳು ಸುಸಂಗತ ಸಂಬಂಧ ಮತ್ತು ನಿರಂತರತೆಯಲ್ಲಿ ರೇಖೆಗಳು ಮತ್ತು ಸಮತಲಗಳನ್ನು ಮೃದುವಾಗಿ ಸುರುಳಿಸುತ್ತಿದೆ. ನಮೂನೆಗಳ ಅಸ್ಥಿರತೆಯನ್ನು ಪಡೆಯಲು ಚಾಕು ಅಥವಾ ಶಾಳೆ ಮಾದರಿಗಳ ಒರಟಾದ ರೇಖೆಗಳನ್ನು ಬಳಸಿದ್ದಾರೆ. ಅವರು ಬೆಸೆಯುವಿಕೆಯ

ತಂಪು ಬರುವ ಮೊದಲು ಪ್ಲಾಸ್ಟರ್‌ನಲ್ಲಿ ಕಬ್ಬಿಣದ ಭದ್ರ ಬಿಗಿತ ಚೂರುಗಳೊಂದಿಗೆ ತಮ್ಮ ಶಿಲ್ಪವನ್ನು ರಚಿಸಿದ್ದಾರೆ. ನಂತರ ಅವರು ಕಬ್ಬಿಣದ ಚೂರುಗಳೊಂದಿಗೆ ಶಿಲ್ಪವನ್ನು ನಿರ್ಮಿಸಲು ಮುಂಬಯಿ ಕಬ್ಬಿಣದ ಕಾರ್ಖಾನೆಯಿಂದ ಅಧಿಕಾರ ಪಡೆದರು. ಅಂದಿನಿಂದ ಅವರು ಬೆಸೆಯುವಿಕೆ ತಂತ್ರದೊಂದಿಗೆ ಕಾರ್ಯಮಗ್ನರಾಗಿದ್ದಾರೆ. ಇದಕ್ಕಾಗಿ ಅವರು ಸಾಮಾನ್ಯವಾಗಿ ಕೈಗಾರಿಕಾ ಉತ್ಪನ್ನಗಳಿಂದ ಬಂದಂತಹ ಕಬ್ಬಿಣದ ಚೂರುಗಳನ್ನು ಕಾರ್ಖಾನೆ ಹಳೆಯ ವೇಸ್ಟ್, ಸಿದ್ಧ ನಮೂನೆಗಳನ್ನು ಉಪಯೋಗಿಸಿದ್ದಾರೆ. ಇದರೊಂದಿಗೆ ಕುಲುಮೆ ಕೆಲಸ, ಕುಟ್ಟುವಿಕೆ, ಬೀಸುವಿಕೆ ಹಾಗೂ ತದನಂತರ ಎರಕವನ್ನು ಪ್ರಾರಂಭಿಸುತ್ತಾರೆ.

ಅವರ ಕೆಲಸದ ರೀತಿಯು ಸಾಮಾನ್ಯವಾಗಿ ಅವರು ಉಪಯೋಗಿಸುವ ಸಾಮಗ್ರಿಯ 'ಪ್ರಕೃತಿ' ಮತ್ತು 'ವಿಧಾನದಿಂದ' ಅಧಿಕಾರ ಹೊಂದಿದೆ. 'ಈ ಬೆಳವಣಿಗೆ', 'ಕಾಕ್ಸ್', 'ಕೊನರುವಿಕೆ ನಮೂನೆ' ಯು ಉತ್ತಮ ಸಂಯೋಜನೆಯಿಂದ, ಕಾರ್ಖಾನೆಯ ವೇಸ್ಟ್‌ನ ಸೂಕ್ಷ್ಮ ಮತ್ತು ಅಂಗಾಂಗ ಸೌಂದರ್ಯವನ್ನು ಹೊರತಂದಿದೆ. ಆದರೆ ಗ್ರಾಮೀಣ ಕಲಾವಿದನೊಬ್ಬ ಪ್ರಕೃತಿಯ ಪ್ರಾಣಿ ಜೀವನವನ್ನು ಚಿತ್ರಿಸಿ ಔದ್ಯೋಗಿಕ ಕೆಲಸವನ್ನು ಯಶಸ್ವಿಗೊಳಿಸಿದ್ದಾರೆ. ಶಿಲ್ಪವು ಒಳ್ಳೆಯ ತಾಂತ್ರಿಕ ಕೌಶಲ ಮತ್ತು ಭಾವನೆಯನ್ನು ತೋರಿಸುವ ಅವರ ಪ್ರಯತ್ನಗಳು ಪಕ್ವಗೊಂಡಿದೆ. ನಂತರ ಅವರ ಅನ್ವೇಷಣೆ, ಬಾವನಾತ್ಮಕ ಲಯಬದ್ಧತೆಯ ಕಲ್ಪನೆ ಮೃದುತ್ವ ಹಾಗೂ ಸುಲಲಿತವಾದುದು.

ಕೈಗಾರಿಕಾ ಎರಕದ ಕಾರ್ಯವಿಧಾನಗಳ ಹೆಚ್ಚಿನ ಉಪಯೋಗದಿಂದ ಶ್ರೀಮತಿ ಪಿಲೂ ಪೂಕನ್‌ವಾಲಾ ಅವರು ವಾಸ್ತುಶಿಲ್ಪದ ಕ್ಷೇತ್ರದಲ್ಲಿ ಹೊಸ ಮಾರ್ಗವನ್ನು ತೋರಿಸಿದರು. ''ದಿ ಸೈಕಲ್ ಅಂಡ್ ನೇಚರ್'' ನಲ್ಲಿ ಸಾಗರ ದೃಶ್ಯ ವಾತಾವರಣವನ್ನು ಚಿತ್ರಿಸಲು ಅಲ್ಯೂಮಿನಿಯಂ ಮಿಶ್ರಲೋಹದಲ್ಲಿ ಚಿತ್ರಿಸಿದ್ದಾರೆ. ಮೊದಲು ೧ ೦ರಿಂದ ವಾಸ್ತುಶಿಲ್ಪದ ಮಾಧ್ಯಮದಲ್ಲಿ ವರ್ಣ ಚಿತ್ರದ ವಿಷಯದ ಬಗ್ಗೆ ಸಾಗರದೃಶ್ಯದ ಮೇಲೆ ಭೂಭಾಗವನ್ನು ರಚಿಸುವಲ್ಲಿ ಭಾರತದಲ್ಲಿ ಬಹುಶಃ ಈಕೆ ಮೊದಲಿಗರು. ಕಲ್ಲಿನ ಪ್ರಾಕೃತಿಕ ರೂಪಗಳೊಂದಿಗೆ ಇಲ್ಲಿ ಒಟ್ಟಾಗಿ ಆಗಿರುವ ಕೈಗಾರಿಕಾ ಉಕ್ಕಿನ ಚೂರುಗಳಲ್ಲಿ, ಬೆಸುಗೆ ಮಾಡಿದ ಶಿಲ್ಪಗಳ ರೂಪ ಮತ್ತು ಕಲ್ಪನೆಯ ಪರಿಣಾಮಕಾರಿಯಾಗಿದೆ. ನಿರ್ಮಾಣಗೊಂಡ ಮತ್ತು ಒಟ್ಟಾದ ರಾಶಿಯು ಆಕಾಶದಲ್ಲಿ ಶೋಭಗೊಂಡಿದೆ ಹಾಗೂ ನೈಸರ್ಗಿಕ ವಾತಾವರಣದ ಭಾವನೆಗಳನ್ನು ಸೃಜಿಸಿವೆ. ಪಿಲೂ ಪೂಕನ್‌ವಾಲಾ ಅವರು ತಮ್ಮ ಆಸಕ್ತಿಯನ್ನು ಮುಂದೆ ತಿಳಿಸಿರುವಂತೆ ವರ್ಣಿಸಿದ್ದಾರೆ. ''ನಾನು ಮುಂಬಯಿಯ ಯೋಜನಾ ರಹಿತ ಅವ್ಯವಸ್ಥಿತ ಬೆಳವಣಿಗೆ ನೋಡಿ ಬೆಳೆದವಳು ಹಾಗೂ ಸಮುದ್ರವು ನನ್ನ ನಿಸರ್ಗದೊಂದಿಗಿನ ಒಂದೇ ಸಂಪರ್ಕ ಹಾಗೂ ಹೆಚ್ಚು ನಗರೀಕೃತ ಮಾದರಿಯ ನಗರದಿಂದ escape ಆಗಿತ್ತು. ಈ ಅನುಭವನದಲ್ಲಿ ನನ್ನ ಸಮುದ್ರದ preocupation ಮೂಲ ಇದೆ'' ಎಂದಿದ್ದಾರೆ.


ಶ್ರೀಮತಿ ಪಿಲೂ ಪೂಕನ್‌ವಾಲಾ ಅವರು ಅಲ್ಯೂಮಿನಿಯಂ ಮಿಶ್ರಲೋಹದಲ್ಲಿ ಸಾಗರ ಚಿತ್ರವನ್ನು ಪ್ರತಿನಿಧಿಸಿದ್ದಾರೆ. ಥರ್ಮೋಕೋಲ್ ಮಾದರಿಗಳಿಂದ ಮಣ್ಣು ಎರಕದ ಕೈಗಾರಿಕಾ ವಿಧಾನಗಳಿಂದ ಅವರು ಕತ್ತರಿಸಿ, ಕೆತ್ತನೆ ಮಾಡಿದ್ದು, ಸುಟ್ಟಿದ್ದಾರೆ. ಸರಳ ಮತ್ತು ಸುಲಭವಾಗಿ ಕೆಲಸ ಮಾಡಬಹುದಾದ ಸಾಮಗ್ರಿ ಇರುವಾಗ ಸಾಗರದ ಹಲವು ಭಾವನೆಗಳು ಮತ್ತು ಸೂಕ್ಷ್ಮತೆಗಳನ್ನು ಎಬ್ಬಿಸುವ ಗಡಸು ಮುಖಗಳನ್ನು ರಚಿಸಿದ್ದಾರೆ. ತಮ್ಮ ಶಿಲ್ಪಕ್ಕೆ ಬಣ್ಣವನ್ನು ತರಲು ಲೋಹದ ಹಲವು ಸಂಯೋಜನೆಗಳನ್ನು ರಚಿಸಿದ್ದಾರೆ. ಈ ಬಣ್ಣ ಬಾಹ್ಯ ರಚನೆಗಿಂತ ಆಕೆಯ ಕಾರ್ಯವಿಧಾನವು ವಾಸ್ತವಿಕವಾಗಿ ಬೆಳೆದದ್ದು ಕಾರ್ಯ ವಿಧಾನದ ಪ್ರತಿಹಂತವು ಪೂರ್ಣ ಪರಿಕಲ್ಪನೆ ಮತ್ತು ಅದರ ವಾಸ್ತವಿಕತೆಯ, ಏಕತೆಯ ಭಾಗವೆಂಬುದಾಗಿ ಹೆಚ್ಚಾಗಿ ನಂಬಿದ್ದರು.

ದೇಶದಲ್ಲಿ ಕಲೆಗಿಂತ ಜೀವನದ ಹೊಸ ಕಲ್ಪನೆಗಳಿಗೆ ವೈಜ್ಞಾನಿಕ ಮತ್ತು ಪ್ರಾಪಂಚಿಕ ಸಂಸ್ಕೃತಿಯ ಪ್ರಭಾವವು ಉನ್ನತ ಸ್ಥಾನವನ್ನು ನೀಡಿದೆ. ಇಂದು ಭಾರತದಲ್ಲಿ ಹಲವು ಶಿಲ್ಪಕಾರರು ತಾರ್ಕಿಕವಾಗಿ ಅಥವಾ ವೈಜ್ಞಾನಿಕ ಸಮರಸವಾದ ಮತ್ತು ಹೆಚ್ಚು ಭಾವನಾ ರೂಪವಾದುದನ್ನು ವ್ಯಕ್ತಪಡಿಸುತ್ತಾರೆ. ಈ ಛಾನೆಯು ಶಿಲ್ಪಕಲೆಯಲ್ಲಿ ಒಂದಾದ ಹಲವು ಕೈಗಾರಿಕಾ ಮತ್ತು ಕೈಗಾರಿಕಾ ಪೂರ್ವ ತಂತ್ರಗಳ ಕಾರ್ಯವಿಧಾನಗಳಂತೆ, ಇಂದು ಬುದ್ಧಿ ಪೂರ್ವಕವಾಗಿ ನಿಯಂತ್ರಣಗೊಂಡಿದ್ದ ಭಾವನಾತ್ಮಕ ಪ್ರತಿಕ್ರಿಯೆಯು ಆ ಚಿತ್ರಕ್ಕೆ ಪಕ್ವವಾಗಿದೆ. ಆದುದರಿಂದ ಅವರ ಕೃತಿಯು ಭಾರತೀಯ ಶಿಲ್ಪಶಾಸ್ತ್ರದ ಇತಿಹಾಸದಲ್ಲಿ ಹೆಗ್ಗುರುತಾಗಿದೆ. ತನ್ನ ಪ್ರಥಮ ಪ್ರಯೋಗಗಳು ಬೌದ್ಧಿಕ ಪ್ರಜ್ಞೆಯನ್ನು ಮತ್ತು ಭಾವನಾತ್ಮಕ ಚೈತನ್ಯದ ಸಮತೋಲನದ ಹೊಸ ನಿರ್ದೇಶನದಲ್ಲಿ ತಮ್ಮ ಶಿಲ್ಪವನ್ನು ಸುಧಾರಣೆಗೊಳಿಸಿದ್ದಾರೆ.

ಆದಿ ದೇವಿಯರ್ ವಾರಾ ಅವರು ೧೯೬೦ರಿಂದ, ವಸ್ತುಗಳಿಗೆ ಪ್ರತಿಕ್ರಿಯೆ ತೋರುವುದನ್ನು ತಾತ್ವಿಕವಾಗಿ ಹಾಗೂ ವೈಜ್ಞಾನಿಕವಾಗಿ ಬಲಪಡಿಸಿದ್ದರು. ಆದ್ದರಿಂದ ಅವರ ಕೃತಿಗಳು ಭಾರತೀಯ ಶಿಲ್ಪಕಲಾ ಇತಿಹಾಸದಲ್ಲಿ ಮೇರು ಕೃತಿಗಳಾಗಿವೆ. ಶಿಲ್ಪ ಕಲೆಯಲ್ಲಿ ಅವರು ಪ್ರಯೋಗಗಳಿಂದ ಒಂದು ಹೊಸ ಮಾರ್ಗವನ್ನು ಕಂಡುಕೊಂಡರು. ಇದು ಸೌಂದರ್ಯ ಪ್ರಜ್ಞೆ ಮತ್ತು ಭಾವನಾಶಕ್ತಿಯ ಮಧ್ಯ ತಾಳೆ ಹೊಂದಿತ್ತು. ಇವುಗಳಿಂದ ಅವರು ವಸ್ತುಗಳ ಈ ಮೂಲಭೂತ ಗುಣಗಳಿಂದ ಅಥವಾ ಅದರ ಸುಂದರ ರೂಪ ಮತ್ತು ತಾಳೆಯಾಗುವ ಗುಣಗಳಿಂದ ಬಿಂಬಿಸಲು ಪ್ರಾರಂಭಿಸಿದರು. ದೃಷ್ಟಿ ಮತ್ತು ಸ್ಪರ್ಶ ಜ್ಞಾನವನ್ನು ದೂರ ಇರಿಸಿ ಮಾಡಿದ ಅವರ ಅಲ್ಯೂಮಿನಿಯಂ, ಪ್ಲಾಸ್ಟಿಕ್ ಹಾಗೂ ಗಾಜುಗಳೊಂದಿಗಿನ ಪ್ರಯೋಗಗಳು ಅವರ ಹೊಸ ಪದ್ಧತಿಯ ರೂಪಗಳನ್ನು ಪಡೆದಿವೆ. ಕೃತಿಗಳಲ್ಲಿ ಮತ್ತು ಸಂಯೋಜನೆಯಲ್ಲಿ ವೈಜ್ಞಾನಿಕ ನಿಖರತೆ ಮತ್ತು ತೀಕ್ಷ್ಣವಾದ ವಿವೇಚನೆ, ಸುಂದರತೆ ಅವರ ಕೃತಿಗಳನ್ನಾಳುವ ಶಕ್ತಿಯಾಗಿದೆ.

ವಸ್ತುಗಳ ತೂಕ, ತೂಕವಿಲ್ಲದಿರುವುದು, ಅವುಗಳ ಕಾಂತಶಕ್ತಿ ಮುಂತಾದ ಅಂತರ ಗುಣಗಳನ್ನು ಗ್ರಹಿಸಲು ಮನುಷ್ಯನ ದೃಷ್ಟಿಜ್ಞಾನ ತಪ್ಪಬಹುದು. ಆದರೆ ಅವು ವಸ್ತುವಿನ ಅಸ್ತಿತ್ವದ ಮೂಲ ಮೌಲ್ಯವಾಗಿವೆ ಮತ್ತು ಅದರಿಂದಾಗಿ ಶಿಲ್ಪದ ಮೂಲ ಮೌಲ್ಯವಾಗಿದೆ. ತರಬೇತಿ ಹೊಂದಿರದ ಕಣ್ಣಿಗೆ ಈ ಆಂತರಿಕ ಮೌಲ್ಯಗಳನ್ನು ಹೊಂದಿರುವ ಶಿಲ್ಪ ಸಮತೋಲನ ಹೊಂದಿರದೆ ಇರುವಂತೆ ಕಾಣಬಹುದು. ಆದರೆ ಅಂತಿಮವಾಗಿ ಸುಂದರವಾದವು ಹಾಗೂ ಅರ್ಥಗರ್ಭಿತವಾಗಿರುವವು. ಅವರ ಈ ಕಲಾ ಕೋನವನ್ನು ಅವರ ಅಲ್ಯೂಮಿನಿಯಂ ಹಾಗೂ ಕಾಂತದಿಂದ ರಚಿತವಾದ 'ಅನಿಮೇಟೆಡ್ ಸಸ್ಪೆನ್ಸ್' (೧೯೭೦) ಎಂಬ ಕಲಾಕೃತಿಯಲ್ಲಿ, ಉಕ್ಕಿನ ಬೆಸುಗೆಗಳಿಂದಾಗಿ 'ಜೆನೆಸಿಸ್' ಎಂಬ ಕೃತಿಗಳಲ್ಲಿ ಕಾಣಬಹುದು. ಹೊಸ ವಸ್ತುಗಳೊಂದಿಗೆ ಹಾಗೂ ಮೌಲ್ಯಗಳೊಂದಿಗೆ ಸಂಶೋಧನೆಗಳು ಈಗ ನಡೆಯುತ್ತಿವೆ. ಕೆಲವು ಶಿಲ್ಪಿಗಳು ತಮ್ಮ ಹಿರಿದಾದ ಶಿಲ್ಪ ಪರಂಪರೆಗೆ ಮೊರೆ ಹೋಗಿದ್ದು, ಉಳಿದವರು ಪಾರಂಪರಿಕ ಪದ್ಧತಿಗಳಿಗೆ ಹಾಗೂ ವಸ್ತುಗಳಿಗೆ ಕೈಗಾರಿಕಾ ತಂತ್ರಜ್ಞಾನ ಬಳಸಿ ಪುನರ್ರಚನೆ ನೀಡಲು ಪ್ರಯತ್ನಿಸುತ್ತಿದ್ದಾರೆ.

ಡಿ.ಪಿ. ರಾಯ್ ಚೌಧುರಿಯವರ ಶಿಷ್ಯರಾದ ಪಿ.ವಿ. ಜಾನಕಿರಾಂ ಲೋಹ ಪಟ್ಟಿಗಳೊಂದಿಗೆ ಕೆಲಸ ಮಾಡಲು ಒಂದು ಲೋಹದ ತಗಡಿನ ಹಿಂಬದಿಯಲ್ಲಿ ಒಡೆಯುವ ಮೂಲಕ ಉಬ್ಬುಚಿತ್ರ ಹಾಗೂ ಬೆಸುಗೆಯ ಸಮಿಶ್ರಿತ ಹೊಸ ವಿಧಾನವನ್ನು ಕಂಡುಹಿಡಿದಿದ್ದಾರೆ. ದಕ್ಷಿಣದಲ್ಲಿ ಇವರ ಶೈಲಿ ಹಾಗೂ ಕೆಲಸದ ವಿಧಾನ



ಪಿಲೂ ಪೂಕನ್‌ವಾಲಾ

ಕಲಾವಿದರೊಂದಿಗೆ ಸ್ಪಂದಿಸಿದೆ. ವಿಶೇಷವಾಗಿ ಅವರ ಶಿಷ್ಯ ದೆಹಲಿಯ ಹಿರಿಯ ಶಿಲ್ಪಿ ಧನರಾಜ್ ಭಗತ್ ಅವರು ಲೋಹದ ಪಟ್ಟಿಗಳೊಂದಿಗೆ ಕೆಲಸ ಮಾಡಿದ್ದರೂ (ಕೊಳಲ ವಾದಕ ಶ್ರೇಣಿ) ಮತ್ತು Rypouse ತಂತ್ರವನ್ನು ''ಪ್ರತಿಪಾದಕ ಬ್ರಹ್ಮಾಂಡ'' ಕ್ರಿಯೆಯಲ್ಲಿ ಬಳಸಿದ್ದರೂ, ಅವರ ಕಾರ್ಯ ವೈಖರಿ ಹೆಚ್ಚು ಪಾರಂಪರಿಕ ಹಾಗೂ ಸಾಂಪ್ರದಾಯಿಕವಾಗಿದೆ. ಜಾನಕಿರಾಂ ಅವರು ಬೆಸುಗೆಯೊಂದಿಗೆ Rypousse ತಂತ್ರವನ್ನು ಬಳಸಿ, ಹಿತ್ತಾಳೆಯನ್ನು ಅಥವಾ ತಾಮ್ರವನ್ನು ಅವರ ಶಿಲ್ಪದ ಮೂಲ ರೂಪಕ್ಕೆ ಒಡೆಯುತ್ತಾರೆ. ಅದಕ್ಕೆ Rypousse ಮಾಡುವ ಬೇರೆ ರೂಪಗಳನ್ನು ನಂತರ ಕೃತಿಗೆ ಬೆಸೆದು, ರೇಖಾ ವಿವರಗಳನ್ನು (ಕಣ್ಣು, ಮೂಗು, ಕೂದಲು ಇತ್ಯಾದಿ) ಲೋಹ ಕಂಬಿಗಳಿಂದ ಸೇರಿಸುತ್ತಾರೆ. ಅವರ ಶಿಲ್ಪಗಳು ಗುಣದಲ್ಲಿ ಮೂರ್ತಿಯಂತಹವು ಹಾಗೂ ಹೆಚ್ಚು ಮುಂದುವರಿದವು. ಅವುಗಳು ಹೆಚ್ಚು ಕಲ್ಪನೆಯಲ್ಲಿ ದ್ವಿಮುಖಿ ಆಯಾಮದಿಂದ ಕೂಡಿವೆ ಮತ್ತು ವಿರಳವಾಗಿ, ಅದ್ಭೂರಿಯಾಗಿ ಅಥವಾ ಶಿಲ್ಪಕೃತಿ ಹೊಂದಿರುತ್ತವೆ. ಲೋಹದ ಏರು ತಗ್ಗುಗಳನ್ನು ಹಾಗೂ ಸಮತಲದ ವ್ಯತ್ಯಾಸವನ್ನು ಒಬ್ಬ ಚಿತ್ರಕಾರನು ಬಣ್ಣಗಳನ್ನು ಬಳಸುವಂತೆ ಬಳಸಿದ್ದಾರೆ. ಹಾಗೂ ಬೆಸೆದ ಲೋಹ ತಂತಿಗಳನ್ನು ರೇಖೆಯಿಂದ ಪೂರ್ಣತೆ ನೀಡಲು ಉಪಯೋಗಿಸಿದ್ದಾರೆ. ಈ ಮೂರ್ತಿಗಳ ವಿನ್ಯಾಸದಲ್ಲಿ ಗೋಥಿಕ್ ವಸ್ತುಗಳಿರುತ್ತವೆ ಮತ್ತು ಇವುಗಳ ಪೂರ್ಣತೆಯಲ್ಲಿ ದಕ್ಷಿಣ ಭಾರತದ ಜಾನಪದ ಶಿಲ್ಪಗಳ ಪ್ರಭಾವ ಕಾಣಬಹುದು. ಇವರ ಶಿಷ್ಯರಾದ ನಂದಗೋಪಾಲ್ ಮತ್ತು ಪರಮ ಶಿವಂ ಅವರ ಕೆಲಸವನ್ನು ಹಾಗೂ ರೂಪಿಸುವ ಪದ್ಧತಿಯನ್ನು ಅವರಿಂದ ಕಲಿತರೂ ಅವರ ಇತ್ತೀಚಿನ ಶಿಲ್ಪಗಳು ಆಭರಣವಾಗುವ ದ್ವಿಮುಖಿ ಆಯಾಮದ ಕೃತಿಗಳಿಂದ ವಿಭಿನ್ನವಾಗಿವೆ.

ಈ ಪೀಳಿಗೆಯ ಶಿಲ್ಪಿ ಶ್ರೀಮತಿ ಮೃಣಾಲಿನಿ ಮುಖರ್ಜಿ ಅವರ ಶಿಲ್ಪಗಳು ಸುಲಭ ಕ್ರಿಯೆಯಾದ ನೇಯ್ಗೆಯನ್ನು ಮಾಧ್ಯಮವನ್ನಾಗಿ ಬಳಸಿದ್ದಾರೆ. ಮೃಣಾಲಿನಿ ಹೆಚ್ಚು ಕ್ರಿಯಾಶೀಲತೆಯ ವ್ಯಕ್ತಿತ್ವ ಹೊಂದಿರುವ, ಸ್ಪಂದಿಸುವ ಕಲಾವಿದೆ. ಅವರು ಬೇರೆ ಬೇರೆಯಾದ ಗುಣವುಳ್ಳ, ಗಾತ್ರವುಳ್ಳ ಬಳೆಗಳ ಸುತ್ತ ಮತ್ತು ಒಂದೇ ಸಮಯದಲ್ಲಿ ಸಡಿಲವಾಗಿ ಹಾಗೂ ಬಿಗಿಯಾಗಿ ಇರುವ ಹೆಚ್ಚು ಸಸ್ಯ ಹೋಲುವ ಶೃಂಗಾರಮಯ ಜೀವಂತ ಜೋಡಣೆಗಳನ್ನು, ಆದರೆ ಅವುಗಳಲ್ಲಿ ಒಂದು ನಿಯಂತ್ರಣಕ್ಕೆ ಒಳಪಡುವ ಆಂತರಿಕ ತಾಂತ್ರಿಕ ವಿಧಾನವಿರುತ್ತದೆ. ಅವುಗಳು ಇರಬೇಕಾದ ಒಳಸ್ಥಳಗಳಿಗೆ ಒಪ್ಪುವ ಹಾಗೂ ವಿಭಿನ್ನವಾಗಿರುವಂತೆ ರೂಪಿಸಿರುವುದನ್ನು ಸುಲಭವಾಗಿ ಗ್ರಹಿಸಬಹುದಾಗಿದೆ. ಅವರ ವಿಭಿನ್ನ ಬಣ್ಣಗಳ ಮತ್ತು ಗಾತ್ರಗಳ ಬಳೆಗಳು, ಈ ಬಳೆಗಳನ್ನು ಗಂಟುಗಳ ರೀತಿ ಅವುಗಳ ಒಪ್ಪುವ ಸಮತಲಗಳ, ಅವುಗಳ ಹೊರ ಚಿಮ್ಮುವ ಪದರಗಳಲ್ಲಿ ಮತ್ತು ಮರೆಯಾಗುತ್ತಿರುವ ರಂಧ್ರಗಳು ಇವುಗಳಿಂದ ಸುಂದರವಾಗಿ ಸಂಯೋಜಿಸಲ್ಪಟ್ಟು, ಹರಿಯುವ ಶೈಲಿಯ ಮೇಲ್ಮೈ ಹೊಂದಿರುತ್ತದೆ. ಅವರು ಒಂದು ಅತ್ಯಂತ ಸಾಮಾನ್ಯವಾದ ವಸ್ತುವುಳ್ಳ ಹಾಗೂ ವಿಧಾನಕ್ಕೆ ಹೆಮ್ಮೆ ಹಾಗೂ ಮಾನ್ಯ ಪಡೆಯುವಹಂತಕ್ಕೇರುವುದರಲ್ಲಿ ಗೆದ್ದಿದ್ದಾರೆ.

(ಮುಂದುವರಿಯುವುದು)


## ಉತ್ತರ ಭಾರತ ಪ್ರವಾಸಗಳು
## Tours to Historical/ Religious Places

| | Frequency | Fare | |
|---|---|---|---|
| 1) Delhi – Yamunotri – Gangotri – Badrinath – Kedarnath – Delhi | 1st/ 3rd Friday | 6,500/- | ** |
| 2) Delhi – Badrinath – Kedarnath – Delhi | Every Mon/Fri | 4,200/- | ** |
| 3) Delhi – Agra – Allahabad –Varanasi – Gaya – Ayodhya – Delhi | 1st/ 3rd Saturday | 5700/- | ** |
| 4) Delhi – Shimla – Kullu – Manali – Chandigarh – Delhi | Every Friday | 4,000/- | * |
| 5) Delhi – Manali – Dalhousie – Vaishnodevi – Amritsar – Chandigarh – Delhi | Every Monday | 5,500/- | * |
| 6) Delhi – Jaipur – Fathepur Sikri – Agra – Mathura – Delhi (Golden Triangle Tour) | Every Mon/Friday | 12,000/- | * |
| 7) Delhi – Mussoorie – Haridwar – Rishikesh – Delhi | Every Tue/Friday | 1,200/- | * |

**We are authorised to run L.T.C. Tours by India Tourism Development Corporation (ITDC) to employees working in various departments of Government of India and Central Government undertakings.**

** **Includes vegetarian food enroute, transport, accommodation & Guide Service**

* **Includes non A/c room accommodation on twin sharing basis by non A/c coach.**

We are running LFC Tours for all banks/ LIC employees. All the above tours are by Super Deluxe buses, starting from our New Delhi office. Also contact for tours to South India & hotel accommodation bookings all over India

**Contact Our Offices for Advance Reservations :** Bangalore – 2226 2633; Hyderabad – 2330 7658; Vizag – 2745565; Vijaywada – 2576624 & Chennai – 2538 5253

ನೀವು ದಿಲ್ಲಿಗೆ ಬಂದಾಗ ಅತ್ಯಾಧುನಿಕ ಸೌಕರ್ಯಗಳೊಂದಿರುವ ನೂರಾರು ರೂಮ್‌ಗಳಿರುವ ಹೋಟೆಲ್ ಸದರನ್‌ನಲ್ಲಿ ವಸತಿ ತೆಗೆದುಕೊಳ್ಳಿ. ರುಚಿಯಾದ ಕರ್ನಾಟಕ ಮತ್ತು ಆಂಧ್ರದ ವಿವಿಧ ವ್ಯಂಜನಗಳು ನಮ್ಮ ಹೋಟೆಲ್‌ನಲ್ಲಿರುವ ರೆಸ್ಟೋರೆಂಟ್‌ಗಳಲ್ಲಿ ಸಿಗುವುವು.

**HOTEL SOUTHERN / SOUTHERN TRAVELS PVT. LTD.**

**(Recognised by Ministry of Tourism, Govt. of India)**

(ದೆಹಲಿಯಲ್ಲಿರುವ ದಕ್ಷಿಣ ಭಾರತದ ಪ್ರಮುಖ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ.)

**Head Office: 18/2, Arya Samaj Road, Karol Bagh, New Delhi – 110 005**
**Ph. 2572 2210,2 573 9508 • Fax: 011-2575 1308 • E-mail: southerntravelsindia@vnsl.com**
**Branch Office: F-24, Dadar Manish Market, Senapati Bapat Marg, Dadar (West), Mumbai – 400 028**
**Ph: 2432 6895, 2432 6688 • Fax: 2432 6688 • E-mail: southerntravels@vsnl.com**

## ಸದಾನಂದ ಸುವರ್ಣರಿಗೆ ಶ್ರೀ ಗುರುನಾರಾಯಣ ಸಾಹಿತ್ಯ ಪ್ರಶಸ್ತಿ - 2003 ಪ್ರದಾನ

ಜನಸಾಮಾನ್ಯರ ಹಿತವನ್ನು ಬಯಸುವಾತ ನಿಜಾರ್ಥದಲ್ಲಿ ಸಾಹಿತಿಯಾಗುತ್ತಾನೆ. ಸಾಹಿತ್ಯ ಮನುಷ್ಯರನ್ನು ಒಂದು ಗೂಡಿಸುತ್ತದೆ. ಎಲ್ಲರ ಮನೆ ಮನ ಬೆಳಗಿಸುವ ಸಾಹಿತ್ಯವನ್ನು ಗುರುತಿಸುವ ಕೆಲಸ ಆಗುತ್ತಿರುವುದು ಶ್ಲಾಘನೀಯ. ಈ ನಿಟ್ಟಿನಲ್ಲಿ ಸದಾನಂದ



ಸುವರ್ಣರು ಜನರ ಹಿತವನ್ನು ಬೆಳೆಸುವಲ್ಲಿ, ಗಳಿಸಿಕೊಳ್ಳುವಲ್ಲಿ ಅನವರತ ದುಡಿದಿದ್ದಾರೆ. ಅವರಿಗೆ ಶ್ರೀ ನಾರಾಯಣ ಗುರು ಪ್ರಶಸ್ತಿ ಸಿಗುತ್ತಿರುವುದು ನಿಜಕ್ಕೂ ಅಭಿನಂದನೀಯ ಸಂಗತಿ ಎಂದು ಖ್ಯಾತ ವೈದ್ಯ ಹಾಗೂ ಮಾಜಿ ಉಪಕುಲಪತಿ ಡಾ. ಬಿ.ಎಂ. ಹೆಗ್ಡೆ ನುಡಿದರು. ಅವರು ಸಾಂತಾಕ್ರೂಜ್ ಪೂರ್ವದ ಬಿಲ್ಲವ ಭವನದಲ್ಲಿ 'ಅಕ್ಷಯ' ಮಾಸಿಕದ ಗೌ.ಪ್ರ ಸಂಪಾದಕ ಎಂ. ಬಿ. ಕುಕ್ಯಾನ್ ಪ್ರಾಯೋಜಿತ ಬಿಲ್ಲವರ ಎಸೋಸಿಯೇಶನ್ ಮುಂಬಯಿ ಸಂಯೋಜಿತ ಶ್ರೀ ಗುರುನಾರಾಯಣ ಸಾಹಿತ್ಯ ಪ್ರಶಸ್ತಿ 2003, ಪ್ರದಾನ ಸಮಾರಂಭದಲ್ಲಿ ಖ್ಯಾತ ನಾಟಕಕಾರ ಸದಾನಂದ ಸುವರ್ಣ ಅವರಿಗೆ ಪ್ರಶಸ್ತಿ ಪ್ರದಾನಿಸಿ ಮಾತನಾಡಿದರು.

ಪ್ರಶಸ್ತಿ ಸ್ವೀಕರಿಸಿದ ಸದಾನಂದ ಸುವರ್ಣರು ಮಾತನಾಡುತ್ತಾ, ಬಿಲ್ಲವರ ಎಸೋಸಿಯೇಷನ್ ನನಗೆ ಬದುಕಿನ ಪ್ರತಿ ಹಂತದಲ್ಲೂ ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಸಂಸ್ಥೆ. ಇದು ನನಗೆ ತವರು ಮನೆಯ ಸಮಾನ, ಸಾಹಿತಿ ಎಂಬ ಭ್ರಮೆ ನನಗಿಲ್ಲ ಎಂದರು.

ಯಶೋಧರ್‌ರವರ ಪ್ರಾರ್ಥನೆ ಹಾಗೂ ಅತಿಥಿಗಳಿಂದ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಆರಂಭಗೊಂಡಿತು. ಗೌ. ಪ್ರ. ಕಾರ್ಯದರ್ಶಿ ನಿತ್ಯಾನಂದ ಡಿ. ಕೋಟ್ಯಾನ್ ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಶಸ್ತಿ ಕುರಿತು ಡಾ. ಸುನೀತಾ ಶೆಟ್ಟಿಯವರು ಮಾತನಾಡಿದರೆ, ಡಾ. ವ್ಯಾಸರಾಯ ನಿಂಜೂರು ಅಭಿನಂದಿಸಿದರು. ಬನ್ನಂಜೆ ಗೋವಿಂದಾಚಾರ್ಯರು ಅಕ್ಷಯ ಗೌ. ಪ್ರ. ಸಂಪಾದಕ

# ಸುತ್ತಮುತ್ತ

ಎಂ. ಬಿ. ಕುಕ್ಯಾನ್‌ರ 'ಸಾಮಯಿಕ' ಕೃತಿ ಬಿಡುಗಡೆಗೊಳಿಸಿ ಶುಭ ಕೋರಿದರು. ಕೃತಿಯ ಬಗ್ಗೆ ಜಿ. ಎನ್. ಉಪಾಧ್ಯ ಮಾತನಾಡಿದರು. ಕೃತಿಕಾರ ಎಂ.ಬಿ. ಕುಕ್ಯಾನ್‌ರವರು ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಿದರು..

ಅಧ್ಯಕ್ಷ ಜಯ ಸಿ. ಸುವರ್ಣರು ಮಾತನಾಡುತ್ತಾ, ಬಿಲ್ಲವರ ಎಸೋಸಿಯೇಷನ್ ಬಿಲ್ಲವ ಸಮಾಜಕ್ಕೆ ಸಂಬಂಧಪಟ್ಟಿದ್ದರೂ, ಶ್ರೀ ಗುರುಗಳ ತತ್ವ, ಸಂದೇಶವನ್ನು ಮುಂದಿಟ್ಟುಕೊಂಡು ಈ ಸಂಸ್ಥೆಯನ್ನು ನಡೆಸುತ್ತಿದ್ದೇವೆ. ಜಾತಿಗಿಂತ ಮನುಷ್ಯ ಮುಖ್ಯ ಎಂಬ ಉದ್ದೇಶದೊಂದಿಗೆ ಎಸೋಸಿಯೇಶನ್ ಕಾರ್ಯನಿರ್ವಹಿಸುತ್ತಿದೆ ಎಂದರು.

ಅತಿಥಿಗಳ ಪರಿಚಯವನ್ನು ನಿತ್ಯಾನಂದ ಡಿ. ಕೋಟ್ಯಾನ್ ಮತ್ತು ಹರೀಶ್ ಹೆಜ್ಮಾಡಿ ಮಾಡಿದರು. ವೇದಿಕೆಯಲ್ಲಿ ಉಪಾಧ್ಯಕ್ಷರುಗಳಾದ ವೈ. ನಾಗೇಶ್, ವಾಸುದೇವ ಆರ್. ಕೋಟ್ಯಾನ್, ಗೌ. ಜತೆ ಕೋಶಾಧಿಕಾರಿ, ಭಾಸ್ಕರ ವಿ. ಬಂಗೇರ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಹೇಮಾವತಿ ಎನ್. ಪಾಲ್ ಉಪಸ್ಥಿತರಿದ್ದರು. ಶಶಿಧರ್ ಮಟ್ಟು ಧನ್ಯವಾದ ಗೈದರು. ಸಭಾ ಕಾರ್ಯಕ್ರಮದ ಬಳಿಕ ಸದಾನಂದ ಸುವರ್ಣರ 'ಗುಡ್ಡೆದ ಭೂತ' ಟೆಲಿ ಧಾರಾವಾಹಿ ಪ್ರದರ್ಶನಗೊಂಡಿತು.

## ಸಾಹಿತ್ಯದಲ್ಲಿ ಸ್ವವಿಮರ್ಶೆ ಬಹಳ ಮಹತ್ವದ್ದು - ಬಿ.ಎ. ಸನದಿ

ಇತ್ತೀಚೆಗೆ ನಡೆದ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ ಆಯೋಜಿಸಿದ ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ ಬಿ.ಎ. ಸನದಿ ಮತ್ತು ಎಂ. ಬಿ. ಕುಕ್ಯಾನ್, ಎನ್. ಆರ್. ರಾವ್, ಡಾ. ಜಿ.ವಿ. ಕುಲಕರ್ಣಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.



ಕಾರ್ಯಕ್ರಮದ ಅಧ್ಯಕ್ಷತೆ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯರವರು ವಹಿಸಿಕೊಂಡಿದ್ದರು.

ವಿಭಾಗದ ಮುಖ್ಯಸ್ಥರಾದ ಉಪಾಧ್ಯರವರು ಕಾರ್ಯಕ್ರಮದ ಪ್ರಸ್ತಾವಿಕವಾಗಿ ಮಾತನಾಡುತ್ತಾ ವಿಭಾಗವು ಮುಖ್ಯವಾಗಿ ಒಂದು ಮನೆಯ ವಾತಾವರಣದಂತೆ ಇದ್ದು, ಹೊರನಾಡಿನ ಹಾಗೂ ಒಳನಾಡಿನ ದೂರದ ಸಾಹಿತಿಗಳನ್ನು ವಿಭಾಗವು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದೆ ಎಂದರು.

ಬಿ.ಎ. ಸನದಿಯವರು ಮಾತನಾಡುತ್ತಾ ಸಾಹಿತ್ಯದಲ್ಲಿ ಸ್ವವಿಮರ್ಶೆ ಬರಬೇಕು. ಇವತ್ತಿನ ಕಾವ್ಯ ಜನಪರವಾಗಿ ಜನತೆಗೆ ನೇರವಾಗಿ ಮುಟ್ಟುವಂತಿರಬೇಕು. ವಿಮರ್ಶೆ ಕಾವ್ಯಕ್ಕೆ ಪೂರಕವಾಗಿರಬೇಕು. ಅಲ್ಲಿ ಪಕ್ಷಪಾತವಲ್ಲದು ಎಂದು ಹೇಳುತ್ತಾ ತಾವು ರಚಿಸಿದ ಕೆಲವು ಕಾವ್ಯಗಳನ್ನು ವಾಚನಮಾಡಿ ವಿದ್ಯಾರ್ಥಿಗಳಿಗೆ ಸಂತೋಷಪಡಿಸಿದರು.

ಎಂ.ಬಿ. ಕುಕ್ಯಾನ್‌ರವರು ಮಾತನಾಡುತ್ತ ಕಾವ್ಯದಲ್ಲಾಗಲಿ, ಸಾಹಿತ್ಯದಲ್ಲಾಗಲಿ ಸ್ವಾರ್ಥ ಪರವಾದ ಮನೋಭಾವನೆ ಇರಬಾರದು. ಇವತ್ತು ಓದಿನ ಅಭಿರುಚಿ ಕಡಿಮೆ ಎಂದರು.

ಡಾ. ಜಿ.ವಿ. ಕುಲಕರ್ಣಿಯವರು ಮಾತನಾಡುತ್ತ ನನ್ನ ಮೊದಲನೆಯ ಕವನ. ನನ್ನ ಹನ್ನೊಂದನೇಯ ವಯಸ್ಸಿನಲ್ಲಿ ಬರೆದಿದ್ದು. ಮುಖ್ಯವಾಗಿ ನನ್ನ ಮೇಲೆ ಕಾವ್ಯ ರಚನೆ ಮಾಡುವುದಕ್ಕೆ ದಟ್ಟವಾದ ಪ್ರಭಾವ ಬೀರಿದವರು. ದ.ರಾ. ಬೇಂದ್ರೆಯವರು ಒಬ್ಬ ಸದ್ಗುರು ಸಿಕ್ಕರೆ ನೂರು ದೀಪಗಳು ಹಚ್ಚಬಹುದು ಎಂದು ಹೇಳಿ ತಾವು ಬರೆದ ಕವನಗಳು ಓದಿದ್ದರು.

ಇದೇ ಸಮಯದಲ್ಲಿ ಎನ್. ಆರ್. ರಾವ್ ತಾವು ರಚಿಸಿದ ಕೆಲವು ಕವನಗಳನ್ನು ಓದಿ ವಿದ್ಯಾರ್ಥಿಗಳ ಮನಸೆಳೆದರು.

## ರಾಷ್ಟ್ರೀಯ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿ ರಾಜೇಂದ್ರ ಬಾಬು ಆಯ್ಕೆ

ದಿಲ್ಲಿಯಲ್ಲಿ 10 ಎಪ್ರಿಲ್ ಮತ್ತು 11ರಂದು ನಡೆಯಲಿರುವ 21ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ನ್ಯಾಯಮೂರ್ತಿ ಎಸ್. ರಾಜೇಂದ್ರ ಬಾಬು ಅವರು ಆಯ್ಕೆಯಾಗಿದ್ದಾರೆ.

'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನವನ್ನು ಕೇಂದ್ರ ಜಾಗೃತ ಆಯುಕ್ತರಾದ ಪಿ. ಶಂಕರ್ ಅವರು ಉದ್ಘಾಟಿಸಲಿರುವರು.

ಚೆನ್ನೈನ ಐಐಟಿಯ ಮಾಜಿ ನಿರ್ದೇಶಕರಾದ ಪದ್ಮಭೂಷಣ ಪ್ರೊ. ಪಿ. ವಿ. ಇಂದಿರೇಶನ್ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿರುವರು. ಮಹಾರಾಷ್ಟ್ರದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಜಿ.ಡಿ. ಜೋಶಿ ಅವರು ಸಾಹಿತ್ಯೋತ್ಸವವನ್ನು, ತಿರುಪತಿ ಸಂಸ್ಕೃತ ವಿದ್ಯಾಪೀಠದ ಕುಲಾಧಿಪತಿಗಳಾದ ಡಾ. ವಿ. ಆರ್. ಪಂಚಮುಖಿ ಅವರು ಸಾಂಸ್ಕೃತಿಕೋತ್ಸವವನ್ನು, ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳೂ, ದಿಲ್ಲಿ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಸುಧಾಕರ್

ರಾವ್ ಅವರು ಕರ್ನಾಟಕ ಪ್ರಗತಿ ಉತ್ಸವವನ್ನು, ಕೇಂದ್ರದ ಮಾಜಿ ಕಾರ್ಯದರ್ಶಿ ಡಾ. ಸರಳಾ ಗೋಪಾಲನ್ ಅವರು ಮಹಿಳಾ ಉತ್ಸವವನ್ನು ಉದ್ಘಾಟಿಸಲಿರುವರು.

ಈ ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ದೇಶಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಪತ್ರಕರ್ತರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿ ಗಳು ಸೇರಿದಂತೆ ಸುಮಾರು ಎರಡು ಸಾವಿರ ಪ್ರತಿನಿಧಿಗಳು ಭಾಗವಹಿಸಲಿರುವರೆಂದು ಸಾಮಗ ಅವರು ತಿಳಿಸಿದರು.

ಕನ್ನಡಕ್ಕೆ ಇನ್ನೂ ಹೆಚ್ಚಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾನ್ಯತೆ ಗೌರವ ದೊರಕಿಸಿ ಕನ್ನಡಿಗರಿಗೆ ಎಲ್ಲಾ ರಂಗಗಳಲ್ಲಿ ಸರಿಯಾದ ನ್ಯಾಯ ಸಿಗುವಂತೆ ಮಾಡುವುದೇ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ ಎಂದು ಸಮ್ಮೇಳನದ ಸಂಚಾಲಕ ಸಾಮಗ ಅವರು ಹೇಳಿದ್ದಾರೆ.

## ಮನೆಮನೆಯಲ್ಲಿ ಸಾಹಿತ್ಯ ಸ್ಪಂದನ ಕಾರ್ಯಕ್ರಮ

ಕನ್ನಡ ಸಾಹಿತ್ಯ ಪರಿಷತ್ತಿನ ಮಹಾರಾಷ್ಟ್ರ ಘಟಕವು ಸಂಯೋಜಿಸಿದ 'ಮನೆಮನೆಯಲ್ಲಿ ಸಾಹಿತ್ಯ ಸ್ಪಂದನ ಕಾರ್ಯಕ್ರಮವು ಥಾಣೆ (ಪಶ್ಚಿಮ) ವಾಸಿಸುವ ಶ್ರೀ ಎ.ಜಿ. ಮುದ್ನಲ್ ಅವರ ಮನೆಯಲ್ಲಿ ರವಿವಾರ 7-3-2004ರ ಸಂಜೆಗೆ 5 ಗಂಟೆಗೆ ಪ್ರಾರಂಭವಾಯಿತು. ಮುಂಬಯಿ ನಗರ, ಉಪನಗರ ಮತ್ತು ಥಾಣೆ ಜಿಲ್ಲೆಗಳ ವಿವಿಧ ಭಾಗಗಳಿಂದ ಹಿರಿ-ಕಿರಿಯ ಸಾಹಿತಿಗಳು ಮತ್ತು ಆಸಕ್ತರು ಬಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಶ್ರೀ ಮುದ್ನಲ್ ಅವರು ಸ್ವಾಗತ ಭಾಷಣ ಮಾಡಿದರು.

ಶ್ರೀ ಎಚ್. ಎಸ್. ಅಡೂರ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದ ಕುರಿತು ಡಾ। ಜಿ.ಡಿ. ಜೋಶಿ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು.

ಶ್ರೀ ಈಶ್ವರ ಸಿ. ನಾವುಂದ ಅವರು 'ಮಾವನ ಮಗಳು', 'ಹೆಣ್ಣು ಹೆತ್ತವರ ತಮ್ಮ ಗೋಳು', 'ಪಕ್ಕದ ಮನೆಯವರು', ಮತ್ತು, 'ಕಾನೂನು ಬಾಹಿರ' ಎಂಬ ಶೀರ್ಷಿಕೆಗಳುಳ್ಳ, ಶ್ರೀ ವಿದ್ಯಾಧರ್ ಮತ್ತು ಶ್ರೀ ಅಡೂರ ಭಾಗವಹಿಸಿದರು. ಅನಂತರ ಶ್ರೀ ನಿಂಗಯ್ಯಾ ಹಿರೇಮಠ ಅವರು 'ಕುರಿಮರಿ' ಎಂಬ ಕಿರುಕವನ ಮಂಡಿಸಿದರು. ಶ್ರೀ ಚಂದ್ರಶೇಖರ್ ರಾವ್, ಶ್ರೀ ಮುದ್ನಲ್, ಡಾ. ಜೋಶಿ, ಶ್ರೀ ವಿದ್ಯಾಧರ್, ಶ್ರೀ ನಾವಂದ ಅವರು ಕವಿತೆಗೆ ಸ್ಪಂದಿಸಿದರು.

ಶ್ರೀ ಎ.ಜಿ. ಮುದ್ನಲ್ ಅವರು ಒಂದು ಹನಿಗವನ ಮತ್ತು ಎರಡು ಮಿನಿ ಕವನಗಳನ್ನು (ಮೃತ್ಯು, ಭ್ರಾಮಕ ಸುಖ) ವಾಚಿಸಿದರು. ಅವುಗಳಿಗೆ ಡಾ. ಗಿರಿಜಾ, ಡಾ. ಜೋಶಿ, ಶ್ರೀ ಹೆಬ್ಬಾರ್, ಶ್ರೀ ಹಿರೇಮಠ, ವಿದ್ಯಾಧರ ಮೊದಲಾದವರು ಸ್ಪಂದಿಸಿದರು.

ಡಾ. ಗಿರಿಜಾ ಶಾಸ್ತ್ರಿ ಅವರು 'ಕಡಲು' ಎಂಬ ಹೃದಯಸ್ಪರ್ಶಿ ಕಥೆಯನ್ನು ಓದಿದರು. ಡಾ. ರಘುನಾಥ್, ಶ್ರೀ ಅಡೂರ್, ಶ್ರೀ ಹಿರೇಮಠ ಮತ್ತು ಹೆಬ್ಬಾರ್ ಚರ್ಚೆಯಲ್ಲಿ ಪಾಲ್ಗೊಂಡರು.

ಕಾರ್ಯಕ್ರಮದ ಕುರಿತು ಸಂತೋಷ ವ್ಯಕ್ತ ಪಡಿಸಿದ ಸಭಾಧ್ಯಕ್ಷ ಅಡೂರ್ ಅವರು ಸಾಹಿತ್ಯ ಹೆಚ್ಚು ಹೆಚ್ಚು ಜನರನ್ನು ತಲುಪಬೇಕು ಎಂದು ನುಡಿದರು. ಶ್ರೀ ಚಂದ್ರಶೇಖರ್ ರಾವ್ ಕಾರ್ಯಕ್ರಮ ನಿರ್ದೇಶಿಸಿ ವಂದನಾರ್ಪಣೆ ಮಾಡಿದರು.

## ಸಾಹಿತ್ಯ ಪರಿಷತ್ತಿನ ಎರಡು ದತ್ತಿ ಉಪನ್ಯಾಸಗಳು

ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಮತ್ತು ಮುಂಬೆಳಕು ಕನ್ನಡ ಬಳಗ ಇವುಗಳ ಸಂಯುಕ್ತ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಎರಡು ದತ್ತಿ ಉಪನ್ಯಾಸಗಳನ್ನು ಶ್ರೀ ಬಿ. ವಿಶ್ವನಾಥ ಕಾಮತ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ 2-3-2004ರಂದು ಅಪರಾಹ್ನ 3 ಗಂಟೆಗೆ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಯಾಗಿ ಬಂದ ಪ್ರಾ. ಅಶೋಕ ಹುಕ್ಕೇರಿ ಅವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಡಾ. ಸುನೀತಾ ಎಂ. ಶೆಟ್ಟಿ ಅವರು ಪರಿಷತ್ತಿಗೆ ಕೊಟ್ಟ ದತ್ತಿನಿಧಿಯ ಉಪನ್ಯಾಸವನ್ನು ಪ್ರೊ. ನಾರಾಯಣ ಮೂರ್ತಿ ಕೆ. ಮಾಡಿದರು. ಕರಾವಳಿಯ ಜಾನಪದ ಕಲೆಗಳ ಬಗ್ಗೆ ತಮ್ಮ ಅಭ್ಯಾಸ ಪೂರ್ಣ ಪ್ರಬಂಧ ಮಂಡಿಸುತ್ತಾ ಮೂರು ಜನಪದ ಹಾಡುಗಳನ್ನು ಹಾಡಿದರು.

ಶ್ರೀ ಮನೋಹರ ಎಂ. ಕೋರಿ ಅವರು ತಮ್ಮ ತಂದೆ ಮುಕ್ಕಣ್ಣಪ್ಪ ಗುರುಸಿದ್ದಪ್ಪ ಕೋರಿ ಹೆಸರಿನಲ್ಲಿ ಪರಿಷತ್ತಿಗೆ ಕೊಟ್ಟ ದತ್ತಿನಿಧಿಯ ಉಪನ್ಯಾಸವನ್ನು ಪ್ರೊ. ಶಿವ ಬಿಲ್ಲವ ಮಾಡಿದರು. ''ಮುಂಬಯಿಯನ್ನು ಶ್ರೀಮಂತಗೊಳಿಸಿದವರಲ್ಲಿ ಕನ್ನಡಿಗರ ಪಾಲು'' ಅವರ ವಿಷಯವಾಗಿತ್ತು. ಬಹುಶಃ ಎಲ್ಲ ಕ್ಷೇತ್ರಗಳಲ್ಲಿ ಕನ್ನಡಿಗರು ಕಾರ್ಯ ಮಾಡಿ ಮುಂಬಯಿಯನ್ನು ಶ್ರೀಮಂತ ಗೊಳಿಸಿದ್ದಾರೆ ಎಂದರು.

ಡೊಂಬಿವಲಿ ಪೂರ್ವದಲ್ಲಿರುವ ರಾಮಕೃಷ್ಣ ಹೋಟೆಲ್ಲಿನ 'ಸಮ್ಮೇಳನ ಹಾಲ್'ನಲ್ಲಿ ಸುವ್ಯವಸ್ಥಿತವಾಗಿ ಏರ್ಪಟ್ಟ ಕಾರ್ಯಕ್ರಮದಲ್ಲಿ ಶ್ರೀ ವಿದ್ಯಾಧರ ಮುತಾಲಿಕ ದೇಸಾಯಿ ಅವರಿಂದ ಸ್ವಾಗತ, ಡಾ. ಜಿ.ಡಿ. ಜೋಶಿ ಅವರಿಂದ ಪ್ರಾಸ್ತಾವಿಕ ನುಡಿ, ಡಾ. ರಘುನಾಥ್ ಅವರಿಂದ ಪರಿಚಯ ಮತ್ತು ಧನ್ಯವಾದಗಳಾದವು.

## ಕನ್ನಡ ಸಂಘ, ಕೆ.ಜೆ. ಸೋಮೈಯ್ಯಾ ಕಾಲೇಜು

ವಿಶ್ವಾಮಿತ್ರರಂತೆ ನಾವು ಸಾಧಕರಾಗಬೇಕು. ಜೀವನವು ಸೃಜನಶೀಲವಾಗಿರಬೇಕು. ಪ್ರಯತ್ನವಿಲ್ಲದೆ ಯಾರೂ ಸಾಧಕರಾಗುವುಗಿಲ್ಲ. ಶಿಕ್ಷಣವು ಮನುಷ್ಯತ್ವ ತುಂಬುವಂತಿರಬೇಕು. ಮಾತೃಭಾಷೆಯಲ್ಲಿ ಕಲಿತವರು ಸಾಧಿಸಿದ ಸಾಧನೆಗಳು ಅಪಾರವಾಗಿವೆ. ಸಾಧಕರನ್ನು ಗುರುತಿಸಿ ಗೌರವಿಸುವುದು ನಮ್ಮ ಕರ್ತವ್ಯ. ಮತ್ಸರವನ್ನು ತೊರೆದು ಮಾನವತೆಯನ್ನು ಮೆರೆಯುವ ಬುದ್ಧಿಯನ್ನು ಪ್ರಗತಿಗಾಗಿ ನಿಸ್ವಾರ್ಥವಾಗಿ ಉಪಯೋಗಿಸಬೇಕಲ್ಲದೆ ಅವನತಿಗಲ್ಲ. ವಿನಯತೆಯಿಲ್ಲದ ವಿದ್ಯಾವಂತನಿಂದ ಪ್ರಯೋಜನವಿಲ್ಲ. ಭ್ರಷ್ಟಾಚಾರ, ಅನ್ಯಾಯಗಳ ವಿರುದ್ಧ ಜನಜಾಗೃತಿ ತೀವ್ರವಾಗಿ ಆಗಬೇಕೆಂದು ಶ್ರೀ ಆದಿಶಕ್ತಿ ಕನ್ನಡ ಸಂಘ ಶಾಲೆಯ ಅಧ್ಯಕ್ಷ ಉಳ್ತೂರುಗುತ್ತು ವಾಮನ ಕೆ. ಶೆಟ್ಟಿ ಅವರು ಸೋಮೈಯಾ ಕಾಲೇಜು ಕನ್ನಡ ಸಂಘ ಏರ್ಪಡಿಸಿದ್ದ ಬಹುಮಾನ ವಿತರಣೆ, ಸನ್ಮಾನ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತಾಡಿದರು.

ಕನ್ನಡ ಶಿಕ್ಷಣವನ್ನು ಪ್ರೋತ್ಸಾಹಿಸಬೇಕು. ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳು ನಮ್ಮಲ್ಲಿ ಅಭಿಮಾನ ಮೂಡಿಸಬೇಕು. ಕನ್ನಡ ದೈನಿಕಗಳನ್ನು ಕೊಂಡು ಓದಬೇಕು. ಕನ್ನಡಕೊಬ್ಬ ಸಂಜೀವಿನಿಯಾಗಿ ಕನ್ನಡಕ್ಕಾಗಿ ದುಡಿಯುವ ಡಾ. ಸಂಜೀವ ಶೆಟ್ಟಿ ಅವರನ್ನು ನಮ್ಮ ಭಾಗ್ಯವೆಂದೇ ಹೇಳಬೇಕೆಂದು ಭಿವಂಡಿಯ ಹೋಟೇಲು ಓನರ್ಸ್ ಎಸೋಸಿಯೇಶನ್‌ನ ಉಪಾಧ್ಯಕ್ಷ ಸುಂದರ ಕೆ. ಶೆಟ್ಟಿ ಅವರು ಅಧ್ಯಕ್ಷ ಸ್ಥಾನದಿಂದ ಹೇಳಿದರು.

ಹೊಸ ತಲೆಮಾರು ಯಕ್ಷಗಾನದಿಂದ ದೂರ ಸರಿಯುತ್ತಿದೆ; ಅವರಲ್ಲಿ ಕಲಾ ಜಾಗೃತಿ ಮೂಡಬೇಕು. ಕನ್ನಡದ ಕಾಯಕಕ್ಕೆ 'ಕನ್ನಡ ಸಂಜೀವಿನಿ' ಡಾ. ಸಂಜೀವ ಶೆಟ್ಟಿ ಅವರಂತಹ ಅನೇಕರು ಬೇಕಾಗಿದ್ದಾರೆ. ವಿದ್ಯಾರ್ಥಿಗಳು ಕನ್ನಡದಲ್ಲಿ ಮಾತಾಡಬೇಕು. ನಮ್ಮಲ್ಲಿ ಸೇವಾ ಪ್ರವೃತ್ತಿಯು ಬೆಳೆಯಬೇಕೆಂದು ಸುಪ್ರಸಿದ್ಧ ಯಕ್ಷಗಾನ ಕಲಾವಿದ, ಮಾಜಿ ಶಾಸಕ ಕುಂಬ್ಳೆ ಸುಂದರ ರಾವ್ ಅವರು ಸನ್ಮಾನಕ್ಕೆ ಉತ್ತರಿಸುತ್ತಾ ಹೇಳಿದರು.

ಕುಂಬ್ಳೆ ಸುಂದರ ರಾವ್ ಅವರನ್ನು ಮತ್ತು ಶ್ರೇಷ್ಠ ಶಿಕ್ಷಕ ಪ್ರಶಸ್ತಿ, ವಿಜೇತ, ಕನ್ನಡ ಸಂಜೀವಿನಿ ಡಾ. ಸಂಜೀವ ಶೆಟ್ಟಿ ಅವರನ್ನು ಕಾಲೇಜಿನ ಹಳೆವಿದ್ಯಾರ್ಥಿ ಬಳಗದ ಪರವಾಗಿ ಶ್ರೀ ಉಳ್ತೂರುಗುತ್ತು ವಾಮನ ಕೆ. ಶೆಟ್ಟಿ, ಸುಂದರ ಕೆ. ಶೆಟ್ಟಿ ಮತ್ತು ಡಾ. ಸುಧಾ ವ್ಯಾಸ ಇವರುಗಳು ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ, ಹಣ್ಣು ಹಂಪಲು, ನೆನಪಿನ ಕಾಣಿಕೆ, ಸನ್ಮಾನ ಪತ್ರಗಳನ್ನಿತ್ತು ಸನ್ಮಾನಿಸಿದರು.

ಆರಂಭದಲ್ಲಿ ಉಪಪ್ರಾಂಶುಪಾಲೆ ಡಾ. ಸುಧಾ ವ್ಯಾಸ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಸಂಜೀವ ಶೆಟ್ಟಿ ಅವರ ಸಂಘದ ಪರವಾಗಿ ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉದಯ ಪೂಜಾರಿ, ನರೇಶ ಶೆಟ್ಟಿ ಅತಿಥಿಗಳ ಪರಿಚಯ ಮಾಡಿದರು. ಮುಲುಂಡಿನ ಮಿತ್ರವೃಂದದ ಅಧ್ಯಕ್ಷರು ಎಸ್. ಕೆ. ಸುಂದರ ಕುಂಬ್ಳೆ ಅವರ ಸನ್ಮಾನ ಪತ್ರವನ್ನು, ಅರ್ಚನಾ ಯಸ್. ಪೂಜಾರಿ ಅವರು ಡಾ. ಸಂಜೀವ ಶೆಟ್ಟಿಯವರ ಸನ್ಮಾನ ಪತ್ರವನ್ನು ಓದಿದರು. ಬಾಬು ಗೌಡ, ರಾಕೇಶ ಶೆಟ್ಟಿ, ಮೋಹನ್ ಅಂಚನ್ ಅತಿಥಿಗಳಿಗೆ ಪುಷ್ಪಗುಚ್ಛಗಳನ್ನಿತ್ತರು.

ಅರ್ಚನಾ ಯಸ್. ಪೂಜಾರಿ ಕಾರ್ಯಕ್ರಮವನ್ನು

ಉತ್ತಮವಾಗಿ ನಿರ್ದೇಶಿಸಿದರು. ಕಾರ್ಯದರ್ಶಿ ಸಂದೀಪ್ ಶೆಟ್ಟಿ ವಂದಿಸಿದರು. 'ಸುಲಭಮಾ' ಸಂಸ್ಥೆಯವರು ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರ ನಿರ್ದೇಶನದಲ್ಲಿ 'ಹೂವಿ' ಎಂಬ ಏಕಾಂಕ ನಾಟಕವನ್ನು ಸುಂದರವಾಗಿ ಸಾದರ ಪಡಿಸಿದರು. ವಿದ್ಯಾರ್ಥಿಗಳಲ್ಲಿ ನರೇಶ್ ಶೆಟ್ಟಿ, ರಿತೇಶ್ ಶೆಟ್ಟಿ, ಹರೀಶ್ ಪೂಜಾರಿ, ಜಯಂತಿ ಪೂಜಾರಿ, ಸವಿತಾ ಕೋಟ್ಯಾನ್, ಸಂಧ್ಯಾ ಶೆಟ್ಟಿ, ಶಿಲ್ಪಾ ಕೋಟ್ಯಾನ್ ಮನೋಜ್ ಕೋಟ್ಯಾನ್ ಇವರುಗಳು ಕಾರ್ಯಕ್ರಮದ ಯಶಸ್ಸಿಗೆ ತುಂಬಾ ಶ್ರಮಿಸಿದ್ದರು.

## ಸಂಗೀತಮಯ ಶ್ರೀರಾಮ ನವಮಿ ಉತ್ಸವ

ಮುಂಬಯಿ ಕನ್ನಡ ಸಂಘದ ಮಹಿಳಾ ವಿಭಾಗದ ಆಶ್ರಯದಲ್ಲಿ ಶ್ರೀ ರಾಮನವಮಿ ಉತ್ಸವವನ್ನು ಸಂಗೀತಮಯ ಕಾರ್ಯಕ್ರಮದೊಂದಿಗೆ ಆಚರಿಸಲಾಯಿತು.

ಸಂಘದ ಮಹಿಳಾ ವಿಭಾಗದವರು ನಡೆಸುತ್ತಿರುವ ದೇವರ ನಾಮ ತರಗತಿಗಳ ವಿದ್ಯಾರ್ಥಿ ವೃಂದದವರಾದ ಲಕ್ಷ್ಮೀಕೃಷ್ಣನ್, ಶಾಂತನಾಗರಕಟ್ಟಿ, ಶ್ಯಾಮಲಾ ನಾಗರಾಜ್, ಶ್ರೀನಿಧಿಮೂರ್ತಿ, ಆನಂದ ಲಕ್ಷ್ಮೀ ಹಾಗೂ ಸುಶೀಲಾ ರಾವ್‌ರವರು ದೇವರ ನಾಮ ತರಗತಿಗಳ ಪ್ರಾಧ್ಯಾಪಕಿ ವಿಧುಷಿ ಸೌಮ್ಯರಾಘವರತ್ನರವರ ನೇತೃತ್ವದಲ್ಲಿ ಶ್ರೀ ಪುರಂದರದಾಸರ 'ನವರತ್ನ ಮಲಿಕಾ' ಒಂಭತ್ತು ಕೃತಿಗಳ ಗಾಯನವನ್ನು ಸುಶ್ರಾವ್ಯವಾಗಿ ಮಾಡಿದರು. ಮೃದಂಗದಲ್ಲಿ ದೇವಾನಂದ ಸಹಕರಿಸಿದರು. ಮೈಸೂರು ಸಂಗೀತ ವಿದ್ಯಾಲಯದ ಪ್ರಾಂಶುಪಾಲೆ ವಿದುಷಿ ಉಮಾನಾಗಭೂಷಣ್ ಅಂದು ಉಪಸ್ಥಿತರಿದ್ದು ಕುಮಾರಿ ಸೌಮ್ಯರವರಿಗೆ ಪುಷ್ಪಗುಚ್ಛ ನೀಡಿ ಸತ್ಕರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಜಿ.ಎಸ್. ನಾಯಕ್‌ರವರು ತರಗತಿಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟದ್ದಕ್ಕಾಗಿ ಸೌಮ್ಯರವರಿಗೆ ಪುಷ್ಪಗುಚ್ಛನೀಡಿ ಸತ್ಕರಿಸಿದರು.

ಅವರ ಪ್ರತಿಭೆಯನ್ನು ಪ್ರಶಂಸಿಸಿ ಯಶಸ್ಸನ್ನು ಹಾರೈಸಿ ಸಂಘದ ಪರಿಯಿಂದ ಗೌರವಧನವನ್ನು ನೀಡಿ ಗೌರವಿಸಿದರು. ಹಿರಿಯ ಸದಸ್ಯೆ ಅಲಮೇಲು ವಿದ್ಯಾರ್ಥಿ ವೃಂದಕ್ಕೆ ಪುಷ್ಪಗುಚ್ಛವನ್ನಿತ್ತು ಗೌರವಿಸಿದರು.

ಈ ನವರತ್ನ ಮಾಲಿಕಾ ತರಗತಿಯ ವಿದ್ಯಾರ್ಥಿ ವೃಂದದಲ್ಲಿ ಹಿರಿಯ ವನಿತೆಯರೇ ಇದ್ದು ವಯೋಮಾನದಲ್ಲಿ ತಮ್ಮ ಪುತ್ರಿಯಂತಿರುವ ತಮ್ಮ ಗುರು ಸೌಮ್ಯ ರಾಘವ ರತ್ನರವರಿಗೆ ಗುರುದಕ್ಷಿಣೆಯನ್ನು ನೀಡಿ ಗೌರವಿಸಿದ ದೃಶ್ಯ ಹೃದಯ ಸ್ಪರ್ಶಿಯಾಗಿತ್ತು.

ಆರಂಭದಲ್ಲಿ ಸಂಘದ ಉಪಾಧ್ಯಕ್ಷೆ ಸುಗುಣ ಶೆಟ್ಟಿಯವರು ಎಲ್ಲರನ್ನೂ ಸ್ವಾಗತಿಸಿದರು. ಮಹಿಳಾ ವಿಭಾಗದ ಸಂಚಾಲಕಿ, ಚಟುವಟಿಕೆಗಳನ್ನು ವಿವರಿಸಿ ಅಂದಿನ ಕಾರ್ಯಕ್ರಮದ ಪ್ರಸ್ತಾವನೆ ಮಾಡಿದರು. ಮೀರಾರಾವ್ ವಂದಿಸಿದರು.

ಮಹಾಮಂಗಳಾರತಿ, ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು. ಶ್ರೀಮತಿ ಗಾಯತ್ರಿರಾಮು ಮತ್ತು ಅಲುಮೇಲುರವರು ಪ್ರಸಾದದ ಪ್ರಯೋಜಕತೆ ವಹಿಸಿದ್ದರು.

## ಕಲಾಸೌರಭದ 11ನೇ ವಾರ್ಷಿಕೋತ್ಸವ
## ಕಲಾ ಸೌರಭದ ಕಲಾತ್ಮಕ ವಾರ್ಷಿಕೋತ್ಸವ

ಮುಂಬಯಿಯ ಕಲಾ ಸೌರಭವು ಕಳೆದ ದಶಕದಿಂದಲೂ ಮುಂಬಯಿಯಲ್ಲಿ ಸಂಗೀತ ಸೇವೆಯನ್ನು ಪರಿಣಾಮಕಾರಿಯಾಗಿ ಮಾಡುತ್ತಿದೆ. ಇತ್ತೀಚೆಗೆ ತನ್ನ 11ನೇ ವಾರ್ಷಿಕೋತ್ಸವವನ್ನು ಕಲಾತ್ಮಕವಾಗಿ ಆಚರಿಸಿ ಸಾರ್ವಜನಿಕರ, ರಸಿಕರ ಮೆಚ್ಚುಗೆ ಪಡೆಯಿತು. ಸಂಸ್ಥೆಯ ನಿರ್ದೇಶಕ ಶ್ರೀ ಪದ್ಮನಾಭ ಸಸಿಹಿತ್ಲುರವರ ನಿರ್ದೇಶನದಲ್ಲಿ ಸಂಗೀತ ರಸಮಂಜರಿ, ರಾಷ್ಟ್ರೀಯ ಜಾದೂ ಪ್ರಶಸ್ತಿ ವಿಜೇತ ಜಾದೂಗಾರ ಶ್ರೀಕಾಂತ್ ಇಂದ್ರರವರಿಂದ ಮಾಯಾಮಂತ್ರ ಮ್ಯಾಜಿಕ್ ಪ್ರದರ್ಶನ, ಗೋಕುಲ ಕಲಾವೃಂದದ ಬಾಲಕಲಾವಿದರಿಂದ ಶ್ರೀಮತಿ ಗೀತಾ ಭಟ್ ನಿರ್ದೇಶನದಲ್ಲಿ ಮಹಿಷಮರ್ದಿನಿ ಯಕ್ಷಗಾನ ಪ್ರದರ್ಶನ, ಅಭಿಜ್ಞಾ ಶೆಟ್ಟಿ ಹಾಗೂ ಪುಟಾಣಿ ಮಕ್ಕಳಿಂದ ಭರತನಾಟ್ಯ, ಕೊರವಂಜಿ ಮತ್ತು ಜಾನಪದ ನೃತ್ಯ ಪ್ರದರ್ಶನ ಕಾರ್ಯಕ್ರಮಗಳು ನಡೆದು ಅಪಾರ ಜನ ಮೆಚ್ಚುಗೆ ಪಡೆಯಿತು. ಇದೇ ಸಂದರ್ಭದಲ್ಲಿ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಗೌರವಿಸಲಾಯಿತು. ಪ್ರತಿಭಾ ಪುರಸ್ಕಾರದ ಅಂಗವಾಗಿ ಖ್ಯಾತ ಚಲನಚಿತ್ರ ಹಿನ್ನೆಲೆ ಗಾಯಕಿ ಕುಮಾರಿ ಪ್ರತಿಮಾ ರಾವ್‌ರವರನ್ನು ವಿದ್ವಾನ್ ಕೆ. ವಿಶ್ವನಾಥ್ ಭಟ್‌ರವರು ಶಾಲು ಹೊದಿಸಿ ಗೌರವಿಸಿದರು. ಸುಪ್ರಸಿದ್ಧ ಹಿನ್ನೆಲೆಗಾಯಕ ಹಾಗೂ ರಂಗನಟ ರಾಜಕುಮಾರ್ ಕರ್ನಾಡ್‌ರವರನ್ನು ಶ್ರೀ ಜಯ ಸುವರ್ಣರವರು ಶಾಲು ಹೊದಿಸಿ ಗೌರವಿಸಿದರು.

ಕಳೆದ 25 ವರ್ಷದಿಂದಲೂ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದ ಪ್ರಾಂಶುಪಾಲೆ ಸಂಗೀತ ವಿದುಷಿ ಶ್ರೀಮತಿ ಉಮಾನಾಗಭೂಷಣ್‌ರವರನ್ನು ಚಲನಚಿತ್ರರಂಗದ ಮತ್ತು ಕಿರುತೆರೆಯ ಸುಪ್ರಸಿದ್ಧ ಹಿರಿಯ ನಟ (ಸಾಯಿ ಬಾಬಾ ಖ್ಯಾತಿ) ಸುಧೀರ್ ದಳ್ವಿಯವರು ಶಾಲು ಹೊದಿಸಿ ಸನ್ಮಾನಿಸಿದರು.

ಸಮಾಜಿಕ ಕಳಕಳಿಯನ್ನು ಹೊಂದಿರುವ ಈ ಸಂಸ್ಥೆಯು ಇದೇ ಸಂದರ್ಭದಲ್ಲಿ ಅಂಗವಿಕಲ ಬಾಲಕಿ ಕುಮಾರಿ ನಿರ್ಮಲಾ ಅಮೀನ್‌ರವರಿಗೆ ವೈದ್ಯಕೀಯ ಮತ್ತು ಶಿಕ್ಷಣದ ನೆರವಿಗಾಗಿ ರೂ. 5001/-ಗಳನ್ನು ದಾನವಾಗಿ ನೀಡಲಾಯಿತು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಅತಿಥಿಗಳು ಸಂದರ್ಭೋಚಿತವಾಗಿ ಮಾತನಾಡುತ್ತಾ ಕಲಾ ಸೌರಭ ಸಂಸ್ಥೆಯು ಹೊಸ ಸಂಗೀತಗಾರರನ್ನೂ, ನೃತ್ಯ ಕಲಾವಿದರನ್ನು ಹಿನ್ನೆಲೆ ಸಂಗೀತಗಾರರನ್ನು ತಯಾರಿಸುವಲ್ಲಿ ಮುಂದಾಗಿರುವದನ್ನು ಪ್ರಶಂಸಿಸಿ, ಕಲಾವಿದರನ್ನು ಗೌರವಿಸುವ, ಸನ್ಮಾನಿಸುವ, ಅಗತ್ಯವುಳ್ಳವರಿಗೆ ಆರ್ಥಿಕ ನೆರವು ನೀಡುವ ಕಾರ್ಯದಲ್ಲಿ ನಿರತರಾಗಿರುವುದು ಅಭಿನಂದನೀಯ ಎಂದು ಹೇಳಿದರು.

ಸಂಸ್ಥೆಯ ರೂವಾರಿ, ನಿರ್ದೇಶಕ ಶ್ರೀ ಪದ್ಮನಾಭ ಸಸಿಹಿತ್ಲುರವರು ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

## ಎಪ್ರಿಲ್ 10ರಿಂದ ದಿಲ್ಲಿಯಲ್ಲಿ 21ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ

'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನವನ್ನು ಕೇಂದ್ರ ಜಾಗೃತ ಆಯುಕ್ತ ಪಿ. ಶಂಕರ್ ಅವರು ಉದ್ಘಾಟಿಸಲಿದ್ದು ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರಾದ ನ್ಯಾಯಮೂರ್ತಿ ಎಸ್. ರಾಜೇಂದ್ರಬಾಬು ಅವರು ಅಧ್ಯಕ್ಷತೆ ವಹಿಸಲಿರುವರು.

ಚೆನ್ನೈನ ಐಐಟಿಯ ಮಾಜಿ ನಿರ್ದೇಶಕರಾದ ಪದ್ಮಭೂಷಣ ಪ್ರೊ. ಪಿ. ವಿ. ಇಂದಿರೇಶನ್ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿರುವರು. ತಿರುಪತಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಕುಲಾಧಿಪತಿ ಡಾ. ವಿ. ಆರ್. ಪಂಚಮುಖಿ ಅವರು ಸಾಂಸ್ಕೃತಿಕೋತ್ಸವವನ್ನೂ, ಮಹಾರಾಷ್ಟ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಜಿ.ಡಿ. ಜೋಶಿ ಅವರು ಸಾಹಿತ್ಯೋತ್ಸವವನ್ನು, ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳೂ, ದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಸುಧಾಕರ ರಾವ್ ಅವರು ಕರ್ನಾಟಕ ಪ್ರಗತಿ ಉತ್ಸವವನ್ನು ಕೇಂದ್ರದ ಮಾಜಿ ಕಾರ್ಯದರ್ಶಿ ಡಾ. ಸರಳ ಗೋಪಾಲನ್ ಅವರು ಉದ್ಘಾಟಿಸಲಿರುವರು.

ಪ್ರಶಸ್ತಿ ವಿತರಣೆ : ಸಮ್ಮೇಳನದಲ್ಲಿ ಪ್ರಖ್ಯಾತ ಪತ್ರಕರ್ತರೂ, ಪ್ರಸಾರ ಭಾರತೀಯ ಅಧ್ಯಕ್ಷರೂ ಆದ ಎಂ.ವಿ. ಕಾಮತ್ ಅವರು 'ಶ್ರೇಷ್ಠ ಹೊರನಾಡ ಕನ್ನಡಿಗ', ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಾಲಯದ ಕಾರ್ಯದರ್ಶಿಗಳಾದ ಡಾ. ಪಿ.ಡಿ. ಶೆಣೈ ಅವರು 'ಶ್ರೇಷ್ಠ ದೆಹಲಿ ಕನ್ನಡಿಗ', ಐಸಿಐಸಿಐ ಬ್ಯಾಂಕಿನ ಕಾರ್ಯ ನಿರ್ವಾಹಕ ನಿರ್ದೇಶಕರಾದ ಕೆ.ವಿ. ಕಾಮತ್ ಅವರು ಟಿ.ಎ. ಪೈ ಸ್ಮಾರಕ 'ಶ್ರೇಷ್ಠ ಬ್ಯಾಂಕರ್' ಪ್ರಶಸ್ತಿಗಳನ್ನು ಸ್ವೀಕರಿಸಲಿರುವರು. ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಶ್ರೀಮತಿಯರಾದ ಶೈಲಜಾ ಮಧುಸೂಧನ್, ತಾರಾ ಬಾಲರಾವ್, ಡಾ. ವೀಣಾ ರಾವ್, ಡಾ. ರತ್ನಾ ಅಹುಜಾ, ವನಜ ಚಂದ್ರಶೇಖರ್, ರಜನಿ ಜೋಶಿ, ಮಾಲತಿ ವೆಂಕಟೇಶ್, ದಾಕ್ಷಾಯಣಿ ಮಟಗಿ, ನೀಲಮ್ಮ ಬೆಳಮಗಿ ಮತ್ತು ಶ್ರೀಯುತರಾದ ಡಾ. ಎಸ್. ಎಸ್. ನರಸಣಗಿ, ಎನ್.ಎನ್. ರೆಡ್ಡಿ, ಆರ್ ಪ್ರಭಾಕರ್, ಬಿ.ಎಸ್. ಕೃಷ್ಣಪ್ರಸಾದ್, ಡಾ. ಜಿ.ಡಿ. ಜೋಶಿ, ಬಿ.ಎಸ್. ಹೆಗಡೆ, ಪಿ.ಎಲ್. ಅಗ್ನಿಹೋತ್ರಿ, ಎನ್.ಎ. ಮಾಧವ, ಡಾ. ಎಂ.ಎಸ್. ಮನ್ನಾರಿ ಅವರುಗಳನ್ನು ಸನ್ಮಾನಿಸಲಾಗುವುದು.

No. TECH/47-202/MBI/2003-05
Date of Posting : 10-04-2004

# The Mysore Association , Bombay

## Along with

## IPTA, Mumbai & Yatri, Mumbai

*Present*

2nd Year

# RANG SHIBHIR

## Six Theatre Workshops for children during Summar Holidays

| No | Workshop | Age Group | Dates | Timings | Conducted by |
|---|---|---|---|---|---|
| 1 | Discover yourself (Brings out the innate creative talents and potential through theatre) | 9-15 yrs | 3rd to 14th May 2004 to 12.30 p.m. | 10.00 a.m. | Om Katare |
| 2 | Mime & Street Theatre (Mime teaches communicating without words and street theatre the resourcefulness to perform almost anywhere, Builds good confidence) | 9-15 yrs | 3rd to 14th May 2004 | 2.30 p.m to 5.00 p.m | Nandagopal |
| 3 | Kahani se Kathputli (Brings out the creative talents in children who will be portraying a story through the puppets made by them) | 7-10yrs | 18th to 28th May 2004 | 10.00 a.m to 12.30p.m | Shaili Sathyu |
| 4 | Yoga, Movement & Dance (Develops grace, rhythm, and synchronization in movements & speech of children) | 9-15yrs | 18th to 28th May 2004 | 2.30p.m to 5.00p.m | Om Katare<br>Vaibhav Joshi |
| 5 | Games & Improvisations (Improves gait speech, posture, movement,grace etc. through theatre and games) | 9-15 yrs | 31st May to 10th June 2004 | 10.00 a.m to 12.30p.m | Om Katare |
| 6 | Sugam Sangeet (Develops appreciation of Music, sense of rhythm, choir singing and voice culture, etc) | 9-15 yrs | 31st May to 10th June 2004 | 2.30 p.m to 5.00 p.m. | Kuldip Singh |

*Venue:*

**The Mysore Association, Bombay**

393 Bhaudaji Road Matunga, Mumbai-400 019

**For details contact** : Ms Anita Ph. 2403 5300 between 11.00 a.m & 6.00 p.m

**LIMITED SEATS! HURRY UP!! REGISTRATION OPENS ON 1ST APRIL**

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938

# ವೇದ ಕಾಲೀನ ಸ್ತ್ರೀಯರ ಪರಂಪರೆ

✍ ವಾಸುದೇವ ಕಾಗೆಮಾರ್

ಭಾರತೀಯ ಸಂಸ್ಕೃತಿಗೆ ಕ್ರಿಸ್ತಪೂರ್ವ ೨೦೦೦ ವರ್ಷಗಳಷ್ಟು ಹಿಂದಿನ ವೈದಿಕ ಪರಂಪರೆಯಿರುತ್ತದೆ ಎಂಬ ಕಾರಣದಿಂದ ಇಂದಿಗೂ ಅಚ್ಚಳಿಯದೆ ಉಳಿದಿರುವ ಅಂದಿನ ಜೀವನ ಮೌಲ್ಯಗಳನ್ನು ನಮ್ಮ ಜೀವನದಲ್ಲೂ ಅಳವಡಿಸಿಕೊಳ್ಳಲಾಗಿದೆ. ಆಗಿದ್ದ ಆಚಾರವಿಚಾರಗಳಲ್ಲಿ ಸ್ತ್ರೀ ಧರ್ಮವು ಅನುಸರಣೀಯವಾದದ್ದು. ಇಂದಿಗೆ ವಿದೇಶಿಯರು ಮೆಚ್ಚುವಂತಿರದಿದ್ದರೂ ಅಚ್ಚರಿಪಟ್ಟು ಆದರಿಸುವಂಥದ್ದು.

ಋಗ್ವೇದ ಕಾಲದ ಮತಾಚಾರಗಳಲ್ಲಿ ಹೆಚ್ಚಿನವು ಇಂದಿನ ಕಾಲಕ್ಕೆ ಅನ್ವಯವಾಗುವುದಿಲ್ಲವೆಂದು ತಿಳಿದುಕೊಳ್ಳುವ ಬದಲು ಅದು ಅಂದಿಗೂ ಇಂದಿಗೂ ಒಂದೇ ತರಹವಿದೆಯೆಂಬ ಸತ್ಯಾಂಶ ಕಂಡುಕೊಂಡರೆ ಸಾಕು. ಇದರಿಂದ ಕಾಲಾತೀತವಾದ ಸಾಮಾಜಿಕ ಪ್ರಜ್ಞೆ ನಮ್ಮಲ್ಲಿದೆಯೆಂಬುದನ್ನು ತಿಳಿದಂತಾಯಿತು. ಆಗಿನ ಕಾಲದ ದೇವತೆಗಳು. ಅವರಿಗೆ ಸಲ್ಲುತ್ತಿದ್ದ ಪೂಜೆ, ಧ್ಯಾನ ಮತ್ತು ಅದಕ್ಕೆ ಸಂಬಂಧಿಸಿದ ಜ್ಞಾನ ಇವುಗಳಿಂದ ಪ್ರಾಪ್ತ ಪ್ರವಾದ ಮತಾಚಾರಗಳಿಗೆ ನಾವು ಇಂದಿಗೂ ಪ್ರಾಶಸ್ತ್ಯಕೊಡುತ್ತಿರುವುದು ಇಂದಿನ ಸಮಾಜ ಉದ್ಧಾರದ ಬಯಕೆಯಿಂದಲೇ. ಈ ಸಭ್ಯತೆಯನ್ನು ಕಾಯ್ದುಕೊಂಡು ಬಂದವರಲ್ಲಿ ನಮ್ಮ ಸ್ತ್ರೀಯರದ್ದು ಹಿರಿಯ ಪಾಲು.

ವೇದಕಾಲದ ಸ್ತ್ರೀಯರು ಬಹಳ ಅಚ್ಚುಕಟ್ಟಿನ ಜೀವನ ಸಾಗಿಸಿದ್ದಾರೆ ಎಂಬ ಪ್ರಶ್ನೆಗೆ ಅವರು ಜೀವನವನ್ನು ಓರಣ ಒಪ್ಪಗೊಳಿಸಲು ಪ್ರಯತ್ನಿಸುತ್ತಿದ್ದಾರೆಂದು ಯಾವ ಕಾಲದಲ್ಲೂ ಅತಿ ಪರಿಶುದ್ಧ ಸ್ತ್ರೀ ಧರ್ಮವಿರುತ್ತದೆ ಎಂದೂ ಹೇಳಬೇಕು. ಇದರಲ್ಲಿ ಒಳಿತನ್ನು ಹಂಸಕ್ಷೀರನ್ಯಾಯದಿಂದ ಗ್ರಹಿಸಿ ತೆಗೆದುಕೊಳ್ಳಬೇಕಿದೆ.

ವೇದರಚನಾ ಕಾಲದ ಋಷಿಗಳು ಏಕಾಂತದಲ್ಲೇ ಹೆಚ್ಚಿಗೆ ಜೀವನ ಮಾಡುತ್ತಿದ್ದು ಸಾಮೂಹಿಕ ಯಾಗ ಪಶುಪಾಲನೆಗಳಲ್ಲೇ ಬಾಳ್ವೆ ಮಾಡುವಂತಿತ್ತು, ಅವರು ಸ್ತ್ರೀ ರೂಪವನ್ನು, ಸ್ತ್ರೀ ಶಕ್ತಿಯನ್ನು, ಆಸಕ್ತ ಹಾಗೂ ರಕ್ಷಣಾರ್ಹತೆಯನ್ನು ತಿಳಿದಿದ್ದರು. ಸ್ತ್ರೀ ಪುರುಷ ಸಂಬಂಧದ ನೈತಿಕ ಕಟ್ಟುಪಾಡುಗಳನ್ನು ಸೈದ್ಧಾಂತಿಕವಾಗಿ ಅವರು ವೇದಮಂತ್ರಗಳಲ್ಲಿ ನಿರೂಪಿಸಿದ್ದುಂಟು. ಅದಕ್ಕೆ ಕೆಲವು ನಿದರ್ಶನಗಳು ಹೀಗಿವೆ.

1. ಹೆಂಡತಿಯೇ ಮನೆ (ಋಗ್ವೇದ 3-53-4)
2. 'ನೀನು ಮನೆಗೆ ಹೋಗು. ಅಲ್ಲಿ ಕಲ್ಯಾಣಿಯಾದ ನಿನ್ನ ಹೆಂಡತಿ. (ಋ - 3-53-6)
3. 'ಪುರುಷನ ಆಲಿಂಗನಕ್ಕೆ ಕನ್ಯೆ ನಮ್ರಳಾಗಿ ಬಿಡುತ್ತಾಳೆ' (ಋ - 3-33-1)
4. 'ಯುವತಿಯು ತೇಜಸ್ವಿನಿ' (1- 123-11)
5. 'ಎಲೈ ಕುಲವಧುವೆ ! ನಿನ್ನ ಗಂಡನ ಕೂಡೆ ಸಿಟ್ಟಾಗದಿರು. ಪ್ರಾಣಿಗಳೆಲ್ಲವನ್ನೂ ಪ್ರೀತಿಸು. ಯಾರನ್ನೂ ದ್ವೇಷಿಸದಿರು. ಕೀರ್ತಿ ಶಾಲಿನಿಯಾಗು, ವಿನಯಿಯಾಗು, ದೇವರುಗಳನ್ನು ಪೂಜಿಸು. ಪುತ್ರ ಸಂತಾನವತಿಯಾಗು. ಅತ್ತೆ ಮಾವ ನಾದಿನಿಯರ ಶುಶ್ರೂಷೆಯಿಂದ ಪರಿತ್ಯಕ್ತಳಾಗಬೇಡ. ಸುಖದಾಯಿನಿಯಾಗಿರು ' (ಋ 10-55-22)
6. 'ಮನೆಯ ಹೆಣ್ಣು ಮಗಳು ಕೆಟ್ಟ ವಾಸನೆ ಪಡೆದು ಮಾರಿಯಾಗದಿರಲಿ. ಗೃಹದಲ್ಲಿ ಅಲಕ್ಷ್ಮಿಯು ವಾಸವಾಗದಿರಲಿ' (ಅಥರ್ವ 2-14-2)
7. 'ವಿವಾಹಿತ ಸ್ತ್ರೀ ಪುರುಷರು ಸುಮನಸ್ಕರಾಗಿ, ಸಚೇತನರಾಗಿ ಸತ್ಕರ್ಮಶೀಲರಾಗಿ ಹಾಗೂ ಅಪರಾಧರಹಿತರಾಗಿ ಯಜ್ಞಾದಿಕಾರ್ಯಗಳನ್ನು ಸಾಂಗಗೊಳಿಸಬೇಕು. ಪತಿಪತ್ನಿಯರು ಮನಸ್ಸಿನಲ್ಲಿ ಅನ್ಯವನ್ನೆಂದಿಗೂ ಬಯಸದಿರಲಿ. ಅನ್ಯೋನ್ಯ ಸುಖ ಪಡೆಯಲಿ' (ಯಜು 12-160)

ಇಂತಹ ಎಷ್ಟೋ ವಿಚಾರಗಳು ಮಹಿಳೆಯ ಕಾರ್ಯಗಳು ಕುಟುಂಬದ ಅಂತರಾಡಳಿತವನ್ನು ನಡೆಸುವುದಾಗಿರಬೇಕು, ಅದಕ್ಕಾಗಿ ಅವರನ್ನು ವಿವಾಹದ ಬಂಧನಕ್ಕೆ ಒಳಪಡಿಸಿ ಗಂಡಿನೊಡನೆ ಜೋಡಿಗೊಳಿಸಿ ಸತ್ ಸಂತತಿಯ ಉತ್ಪಾದನೆಗೆ ದಾರಿಮಾಡಿಕೊಡಬೇಕು ಎಂಬ ಮೂಲ ಕಲ್ಪನೆಯನ್ನು ಪ್ರಚುರ ಪಡಿಸಿವೆ.

ಸ್ತ್ರೀಯಲ್ಲಿ ಅವಳ ಮಮತಾಮಯವಾದ ಅಂತಃಕರಣವನ್ನು ಋಗ್ವೇದವು ಬಹಳ ಮೆಚ್ಚಿಕೊಂಡಿದೆ. ಆಕೆ ಪ್ರೇಮಕಾಮದ ಕಮನೀಯ ಸ್ತೋತ್ರವೂ ಹೌದು. ಆಕೆ ವರ್ಚಸ್ವಿನಿ, ಜನಗಳ ಚಿತ್ತವನ್ನು ಚಂಚಲಗೊಳಿಸುವ, ನಯನಗಳಿಗೆ ಅನುರಾಗವನ್ನು ಕೊಡುವವಳಿದ್ದು ನವಯುವತಿಯಿಂದ ಭೂಮಿಯಲ್ಲಿ ಅರಳಿದ ಆನಂದಕೋಶವು ನಿರ್ಮಾಣವಾಗಿದೆಯೆಂದು 14ನೆ ಕಾಂಡದಲ್ಲಿರುವ ವಿವಾಹಸೂಕ್ತವು ತಿಳಿಸುತ್ತದೆ. ಮಹಿಳೆಯರು ಶುಭಮಂಗಲಿಯರೆಂದು ಹೇಳಿ ಅವರನ್ನು ಕನ್ಯಾ, ಜಾಯಾ (ಮನೆಯೊಡತಿ, ಹೆಂಡತಿ), ಗಾಹಿತಾ (ಮಗಳು), ಭಗಿನೀ (ಸೋದರಿ) ಮಾತಾ, ಮೇಷಾ (ಹೆಂಗಸು) ಮತ್ತು ಭರ್ತ್ರಾಣೀ (ಸಂರಕ್ಷಕಿ) ಎಂದು ಕೆಲವು ವಿಧಾನಗಳಲ್ಲಿ ವಿವಿಧಾವಸ್ಥೆಗಳಲ್ಲಿ ವೇದಗಳು ನಿರೂಪಿಸಿವೆ.

ವೇದಗಳು ಸ್ತ್ರೀ ಪ್ರಜ್ಞೆಯ ಪ್ರತೀಕವಾಗಿ ಸರಸ್ವತಿ ದೇವಿಯನ್ನು ಪ್ರಜ್ಞಾನದ ಸತ್ವವನ್ನಾಗಿ ತೆಗೆದುಕೊಂಡರೆ ಇನ್ನೊಮ್ಮೆ ಮೋಹಕ ಮಾಡುವ ಉಷೆಯನ್ನಾಗಿ ಕೊಂಡಿದ್ದಾರೆ. ಸ್ತ್ರೀ ಪ್ರತೀಕಗಳು ಇನ್ನೂ ಕೆಲವು ವೇದಗಳಲ್ಲಿ ಆರಾಧನೀಯವಾಗಿವೆ. ಸಮಸ್ತರ ಮಹಾಮಾತೆಯಾದ ಅದಿತಿಯ ಪ್ರಸ್ತಾಪವು ಋಗ್ವೇದದಲ್ಲಿ ಬರುತ್ತದೆ. (1-89). ಆಕೆ ಪೃಥ್ವೀದೇಯ 'ಭೂತಪ್ರಪಂಚಕ್ಕೆ ಅನ್ನದಾನಿ'ಯೆಂದು ಆರಾಧಿಸಲ್ಪಟ್ಟಿದ್ದಾಳೆ. ಆಕೆ ಜಡ ಜೀವಗಳ ಧಾರಕಳು, ಕ್ಷಿತಿ, ಜಲ ಮೊದಲಾದ ಸಂಪತ್ತಿಗೆ ಅಭಿಮಾನಿನಿ. ಆಕೆ ಅನೇಕ ಪ್ರವಾಹಗಳಿಂದ ಕೂಡಿದ ನದಿ ನದಗಳಿಂದ ಸಂತೋಷಪಡುವವಳೂ, ಶುಭ್ರವರ್ಣೀಯೂ ಹೌದು. ಪ್ರಾಯಶಃ ಅದಿತಿಯೆಂದರೆ ಪ್ರಕೃತಿ ಎಂದು ಇರಬಹುದು.

ನದೀ ದೇವತೆಯಿಂದ ಸರಸ್ವತಿ, ಸರಯೂ ಸಿಂಧು ಗಂಗೆಯಂತಹವರು ಭಾರತದ ಜನಜೀವನಕ್ಕೆ ಪ್ರಾಣದಾತೆಯರೆಂದಿದೆ (10-25).ನದೀ ತಟಗಳಲ್ಲಿ ಋಷ್ಯಾಶ್ರಮವಿದ್ದಾಗ ಅವರೆಲ್ಲ ಸ್ವಾಗತಿಸಿದ್ದಾರೆ. ಅದಲ್ಲದೆ ಆಪಃ ಜಲ್ಮ ಸ್ತ್ರೀ ದೇವಿ. ಅಪ್ಸೇ ದೇವಿ ಮಾನವರ ಪಾಪಗಳನ್ನು ನಾಶಮಾಡಿ ಕಲ್ಯಾಣವುಂಟು ಮಾಡುವವಳು. ಅಪೇ ದೇವಿಗೂ ಸೋಮದೇವತೆಗೂ (ಆನಂದದ ಅಭಿಮಾನಿ) ಸಖ್ಯ ಸಂಬಂಧವಿದೆ. 'ನಮಗೆ ಸಂಜ್ಞಾನವು ಸಂಪ್ರಾಪ್ತವಾಗುವಂತೆ ಮಾಡಿರಿ'(10-1-1) ಎಂದು ಅವರನ್ನು ಪ್ರಾರ್ಥಿಸಿದ್ದುಂಟು. ಪರ್ಜನ್ಯನನ್ನು (ಮಳೆ) ಪುರುಷದೇವತೆಯೆಂದು ತೆಗೆದುಕೊಂಡಿದ್ದರು. ಪರ್ಜನ್ಯವು ಆಪದ ಸ್ತ್ರೀ ಲಾಲಿತ್ಯವನ್ನು ಕಂಡಿರದ ಕಾರಣವಾಗಿರಬಹುದು.

ವೇದಗಳಲ್ಲಿ ಇನ್ನೂ ಹಲವು ದೇವಿಯರಿರುವರು ಶ್ರದ್ಧಾ ಎಂಬ ಸುಗುಣವು ದೇವಿಯಾಗಿ ಸ್ತುತಿಸಲ್ಪಟ್ಟಿದೆ. (10-151). ವಾಗ್ಯಾಂಭೃಣಿಸ್ತ್ರೀ ಎಂಬ ದ್ಯುಸ್ಥಾನದ (ಸ್ವರ್ಗದ) ಪರಿಚಾರಿಕೆ ದೇವಿಯಿದ್ದಾಳೆ. ಘೋಷಾ ಗೋಧಾ, ವಿಶ್ವಸಾಯ, ಅಪಾಲಾ, ರೇವತಿ, ಸ್ವಾಹಾ, ಸ್ವಧಾ, ಗಾಯತ್ರಿ, ಇಂದ್ರಾಣಿ, ಲೋಪಾಮುದ್ರೆ ಇಂತಹ ಅನೇಕ ದೇವಿಯರು ವೇದಕಾಲದಲ್ಲಿನ್ನೂ ಜನಪ್ರಿಯವಾಗಿರಲಿಲ್ಲ, ಲಕ್ಷ್ಮೀ ವಾಗ್ದೇವಿ, ಮೃತ್ಯು ದೇವಿಯಾಗಿ ಆಗಿರಲಿಲ್ಲವಾದರೂ ಶ್ರೀ, ಸರಸ್ವತಿ, ಉಮ, ಉಷೆ, ನಿಶಾಯಂತವರು ಇದ್ದರು.

ವೇದಗಳಲ್ಲಿ ದಾಂಪತ್ಯ ಜೀವನಕ್ಕೆ ವಿಶೇಷ ಪ್ರಾಧಾನ್ಯವಿದೆ. ಸ್ತ್ರೀಯರು ಗೃಹಸ್ವಾಮಿನಿಯರಾಗಿ ಜ್ಞಾನಿಗಳಾಗಿರಬೇಕೆಂದಿದೆ. ಆಗ ಪುರುಷರಂತೆ ಸ್ತ್ರೀಯರಲ್ಲೂ ಬ್ರಹ್ಮವಾದ ಮಾಡುವವರು ಇದ್ದರು. ಬೃಹದಾರಣ್ಯಕದಲ್ಲಿ ಕಾತ್ಯಾಯಿನಿಯೆಂಬೊಬ್ಬಳು ಸಾಮಾನ್ಯ ಸಂಸಾರಿ ವರ್ಗಕ್ಕೆ ಸೇರಿದ ಮಹಿಳೆಯಾದರೆ ಯಾಜ್ಞವಲ್ಕ್ಯರ ಇನ್ನೊಬ್ಬ ಪತ್ನಿ ಮೈತ್ರೇಯಿ ಅಧ್ಯಾತ್ಮ ಜ್ಞಾನ ಪಿಪಾಸೆಯುಳ್ಳವಳು. ಇನ್ನು ಜನಕರಾಜನ ಸಭೆಯಲ್ಲಿ ವಾಗ್ಯುದ್ಧ ನಿಷ್ಣಾತಳಾದ ಜ್ಞಾನಿ ಗಾರ್ಗಿಯು ಸ್ತ್ರೀಯರ ಅಧಿಕಾರಗಳಿಗಾಗಿ ಹೋರಾಡುವುದನ್ನು ಕಾಣಬಹುದು. ಮಹರ್ಷಿ ಯಜ್ಞ ವಲ್ಕ್ಯನಿಗೆ ಪ್ರತಿ ಸವಾಲು ಹಾಕಿ ಆತನ ಬಾಯಿಕಟ್ಟಿಸಬಲ್ಲ ಆಕೆಯು ಅವನ ಬಾಯಿಯಿಂದ ಆತ್ಮವು ಸರ್ವವ್ಯಾಪಕವೆಂಬ ಸಿದ್ಧಾಂತವನ್ನು ಹೊರಪಡಿಸುತ್ತಾಳೆ.

ವೇದಗಳಲ್ಲಿ ಇನ್ನೂ ಹಲವು ಸೂಕ್ತಗಳನ್ನು ಲೋಪಾಮುದ್ರಾ, ವಿಶ್ವಾವರ, ಸಿಕತಾ, ನಿದಾವರೀ ಮುಂತಾದ ಮಹಿಳೆಯರು ರಚಿಸಿದ್ದಾರೆ. ಆ ಕಾಲದಲ್ಲಿ

(ಪುಟ 9ಕ್ಕೆ)